ಸಂಪುಟ : 8 ಸಂಚಿಕೆ : 275 ಪುಟ : 4 ಬೆಲೆ : 3.00 ಮಂಗಳವಾರ ಡಿಸೆಂಬರ್ 12, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ






Volume : 8 Issue : 275 Pages : 4 Price : 3.00 Tuesday December 12, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 12 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 30 76 ಪ್ಲಾಟ್. ವಾರ್ಡ್ ನಂ 22 ಕಮತರ ಪ್ಲಾಟ್, ಟವರ್ ಕಂಬ, ಶಿಗ್ಗಾವಿ ಲೇಔಟ್, ಕುರುಗಲ್ ಲೇಔಟ್, ವಾಲ್ಮೀಕಿ ಭವನ, ವಿಜಯನಗರ ಕೆಲವು ಭಾಗಗಳು.

ವಾರ್ಡ್ ನಂ. 19, 20 ಹಾಳದಿಬ್ಬ, ಸಿಟಿ ಹಾಲ್ ಭಾಗ–1, 2 ವಿಭೂತಿ ಓಣಿ, ಕರಿ ದೇವರಗುಡಿ ಲೈನ್, ಪಲ್ಲೇದ ಓಣಿ, ತೇರದಾಳ ಭಾಗ –1,2,3 ಗೌಳಿಯವರ ಲೈನ್ ಭಾಗ–1, 2, 3. ವಾರ್ಡ್ ನಂ. 15, 16, 17 ಶಹಪೂರ ಪೇಟೆ, ಜವಳಗಲ್ಲಿ, ಡಿಸಿ ಮಿಲ್ ರೋಡ್, ಮೀನಿನ ಮಾರ್ಕೆಟ್, ಕರ್ನಾಟಕ ಟಾಕೀಸ್, ಅಂಗನವಾಡಿ ಲೈನ್, ಮಹೇಂದ್ರಕರ್ ಸರ್ಕಲ್, ಗಾಂಧಿ ಸರ್ಕಲ್, ಶುದ್ಧ ನೀರಿನ ಘಟಕದ ಲೈನ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್. ವಾರ್ಡ್ ನಂ. 33 ರಾಧಾಕೃಷ್ಣ ನಗರ.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು ಅವುಗಳನ್ನು ದೃಶ್ಯ ಮಾಧ್ಯಮ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಕರವನ್ನು ಸಂದಾಯ ಮಾಡಿ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

**ಗಣಿ ಇಲಾಖೆಯ ಕಚೇರಿ ಮೇಲೆ ದಿಢೀರ್ ದಾಳಿ ನಡೆಸಿದ ಲೋಕಾಯುಕ್ತ ಡಿವೈಎಸ್ಪಿ ವಿಜಯಕುಮಾರ ಬಿರಾದಾರ ತಂಡ**

# ತೆರಿಗೆ ವಂಚಕ ಮರಳು ದಂಧೆಕೋರರಿಗೆ ಬಿಸಿ ಮುಟ್ಟೀತೇ?

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಕಾನೂನುಬಾಹಿರ ಮರಳು ಗಣಿಗಾರಿಕೆ ಲಂಗು–ಲಗಾಮಿಲ್ಲದೆ ಸಾಗುತ್ತಲೇ ಇದೆ. ಈ ಅಕ್ರಮದ ವಿರುದ್ಧ ಜಿಲ್ಲಾಡಳಿತ, ಇಲಾಖೆಯ ಅಧಿಕಾರಿಗಳು ಎಷ್ಟೇ ಕ್ರಮವಹಿಸಿದರೂ ಕೂಡ ದಂಧೆ–ಕೋರರು ಇನ್ನಷ್ಟು ಚಾಲಾಕಿಗಳಾಗುತ್ತಿದ್ದಾರೆ. ಮರಳು ಸಾಗಾಣಿಕೆಗೆ ಪರವಾನಗಿ ಪಡೆಯುತ್ತಾರೇನೋ ನಿಜ. ಆದರೆ, ದೂರದ ಉಡಪಿ ಜಿಲ್ಲೆಗೆ ಪರವಾನಗಿ ಪಡೆದು, ಅದೇ ಪತ್ರವನ್ನಿಟ್ಟುಕೊಂಡು ಪಕ್ಕದ ಹುಬ್ಬಳ್ಳಿಗೆ ಎರಡು–ಮೂರು ಟಿಪ್ಪರ್ ಮರಳು ಸಾಗಿಸುವ ಮೂಲಕ ಸರ್ಕಾರಕ್ಕೆ ತೆರಿಗೆ ವಂಚನೆಯನ್ನೂ ಮಾಡುತ್ತಿದ್ದಾರೆ.

ಜಿಪಿಎಸ್ ಮೇಲೆ ನಿಗಾ ವಹಿಸಬೇಕಿದ್ದ ಗಣಿ ಇಲಾಖೆಯೂ ಮೌನಕ್ಕೆ ಶರಣಾಗಿದ್ದು, ಪ್ರತೀ ತಿಂಗಳು ಲಕ್ಷಾಂತರ ರೂ. ತೆರಿಗೆ ವಂಚನೆಯೂ ನಡೆಯುತ್ತಿದೆ. ಈ ವಿಚಾರವಾಗಿ ಗಣಿ ಇಲಾಖೆಯ ಕಚೇರಿಯ ಮೇಲೆ ಸೋಮವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ದಾಖಲೆಗಳ ಪರಿಶೀಲನೆ ನಡೆಸಿ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ.



ಜಿಲ್ಲೆಯಲ್ಲಿ ಗಣಿ ಇಲಾಖೆಗೆ ಸಂಬಂಧಿಸಿ ಸಾಕಷ್ಟು ಸಮಸ್ಯೆಗಳು, ದೂರುಗಳು ಕೇಳಿಬರುತ್ತಿದ್ದರೂ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳ ದಿಢೀರ್ ದಾಳಿ ಅಧಿಕಾರಿಗಳ ನಿದ್ದೆಗೆಡಿಸಿದೆ. ಹಲವೆಡೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಪಡೆದ ಗುತ್ತಿಗೆದಾರರು, ಅಕ್ರಮ ದಂಧೆಯನ್ನೂ ನಡೆಸುತ್ತ ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆಂಬ ಆರೋಪ ಸಾರ್ವಜನಿಕರಿಂದ ಪದೇ ಪದೇ ಕೇಳಿಬರುತ್ತಲೇ ಇತ್ತು. ಈ ಹಿನ್ನೆಲೆಯಲ್ಲಿ ಗದಗ ಗಣಿ ಇಲಾಖೆಯ ಕಚೇರಿಯ ಮೇಲೆ ಲೋಕಾಯುಕ್ತ ಡಿವೈಎಸ್ಪಿ ವಿಜಯಕುಮಾರ ಬಿರಾದಾರ ನೇತೃತ್ವದ ತಂಡ ದಾಳಿಯ ಮುಂದಿನ ಪರಿಣಾಮ ಏನಾಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

ದಾಳಿಯ ಸಂದರ್ಭದಲ್ಲಿ ಕೆಲ ದಾಖಲೆಗಳನ್ನು ನೀಡಲು ಗಣಿ ಇಲಾಖೆಯ ಅಧಿಕಾರಿಗಳು ತಡಬಡಾಯಿಸಿದಾಗ, ಅಸಮಾಧಾನಗೊಂಡ ಲೋಕಾಯುಕ್ತ ಡಿವೈಎಸ್ಪಿ ವಿಜಯಕುಮಾರ ಬಿರಾದಾರ ನೇತೃತ್ವದ ಲೋಕಾಯುಕ್ತ ಅಧಿಕಾರಿಗಳ ತಂಡ, ಸುಮಾರು ಎರಡು ಗಂಟೆಗಳ ಕಾಲ ದಾಖಲೆಗಳ ಪರಿಶೀಲನೆ ನಡೆಸಿ ಕೆಲ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ವಿಷಯವಾಗಿ ಲೋಕಾಯುಕ್ತದ ಹಿರಿಯ ಅಧಿಕಾರಿಗಳಿಗೆ ವರದಿ ನೀಡುವುದಾಗಿ ಗಣಿ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ ಹೋಗಿದ್ದಾರೆ.

ಇಷ್ಟೊಂದು ದೊಡ್ಡ ಅವ್ಯವಹಾರ ನಡೆಯುತ್ತಿದ್ದರೂ ಕೂಡ ಗಣಿ ಇಲಾಖೆಯ ಅಧಿಕಾರಿಗಳ ಮೌನದ ಬಗ್ಗೆ ಸಾರ್ವಜನಿಕರು ಅನುಮಾನ ವ್ಯಕ್ತಪಡಿಸುವಂತಾಗಿದೆ. ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುವ ದಂಧೆಕೋರರಿಗೆ ಹಾಗೂ ಇವರಿಗೆ ಸಹಕಾರ ನೀಡಿದ ಗಣಿ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಲೋಕಾಯುಕ್ತ ಅಧಿಕಾರಿಗಳ ದಾಳಿಯ ಬಳಿಕ ಎಚ್ಚೆತ್ತಿರುವ ಗಣಿ ಇಲಾಖೆಯ ಹಿರಿಯ ಅಧಿಕಾರಿಗಳು ಕಚೇರಿಯ ಸಿಬ್ಬಂದಿಗಳಿಗೆ ಕ್ಲಾಸ್ ತೆಗೆದುಕೊಂಡಿದ್ದು, ಪೂರಕ ಮಾಹಿತಿ ನೀಡುವಂತೆ ಡಿಸೆಂಬರ್ 25ರವರೆಗೆ ಗಡುವು ನೀಡಿದ್ದು, ಸಮಸ್ಯೆ ಇತ್ಯರ್ಥವಾಗದಿದ್ದಲ್ಲಿ ಸಿಬ್ಬಂದಿಗಳೇ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಲು ಗಣಿ ಇಲಾಖೆಯ ಅಧಿಕಾರಿಗಳು ನಿರಾಕರಿಸಿದರು.

---

**ಲಿಂ. ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಗೆ ಶಿಫಾರಸಿಗೆ ಮನವಿ**

# ಪಂ. ಗವಾಯಿಗಳು ಈ ನಾಡಿನ ಹೆಮ್ಮೆ



■ ವಿಜಯಸಾಕ್ಷಿ ಸುದ್ದಿ, ಗದಗ

ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಗೆ ಶಿಫಾರಸ್ಸು ಹಾಗೂ ಗದಗ ಹೊಸ ರೈಲು ನಿಲ್ದಾಣಕ್ಕೆ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಹೆಸರನ್ನು ನಾಮಕರಣ ಮಾಡುವಂತೆ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಶ್ರೀಗಳಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಶಸ್ತಿ ಲಭಿಸುವಂತೆ ಹಾಗೂ ಗದಗ ಹೊಸ ರೈಲು ನಿಲ್ದಾಣಕ್ಕೆ ಡಾ. ಗವಾಯಿಗಳ ಹೆಸರನ್ನು ನಾಮಕರಣ ಮಾಡುವಂತೆ ರೈಲ್ವೆ ಇಲಾಖೆಗೆ ಶಿಫಾರಸು ಮಾಡಬೇಕೆಂದು ಪೂಜ್ಯ ಫಕ್ಕೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಶ್ರೀ ಪಂಡಿತ ಪುಟ್ಟರಾಜ ರೈತ ಸಂಘದ ಸಂಸ್ಥಾಪಕ ಎಂ.ಪಿ. ಮುಳಗುಂದ ಮಾತನಾಡಿ, ಗದುಗಿನ ನಡೆದಾಡುವ ದೇವರೆಂದೇ ಪ್ರಸಿದ್ಧರಾದ, ಅಂಧರ ಬಾಳಿಗೆ ಬೆಳಕಾಗಿರುವ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಈ ನಾಡಿನ ಹೆಮ್ಮೆ. ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದರು.

ಪೂಜ್ಯ ಫಕ್ಕೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಸಂಗೀತ, ಸಾಹಿತ್ಯ, ನಾಟಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗೈದ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಗವಾಯಿಗಳವರಿಗೆ ಈ ಮೊದಲೇ ಭಾರತರತ್ನ ಪ್ರಶಸ್ತಿಯನ್ನು ನೀಡಬೇಕಾಗಿತ್ತು. ಆದರೆ, ಅವರ ಬಗ್ಗೆ ಯಾರೂ ಕಾಳಜಿ ವಹಿಸಿಲ್ಲ.

▸▸ 3ನೇ ಪುಟಕ್ಕೆ

---

**'ಬ್ರಾಂಡ್ ಮೈಸೂರು' ಲೋಗೋ ಬಿಡುಗಡೆಗೊಳಿಸಿದ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ**

# ಪಾರಂಪರಿಕ ತಾಣಗಳ ರಕ್ಷಣೆಗೆ ಸಹಕರಿಸಿ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಮೈಸೂರನ್ನು ಅರಮನೆಗಳ ನಗರಿ ಎಂದೇ ನೋಡುತ್ತೇವೆ. ಜಗತ್ತಿನಲ್ಲಿ ಹಲವಾರು ಪ್ರವಾಸಿ ಕ್ಷೇತ್ರಗಳು ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡುತ್ತದೆ. ಹಳೆಬೀಡು–ಬೇಲೂರಿನ 72 ಸುಂದರ ಮೂರ್ತಿಗಳನ್ನು ಬ್ರಿಟಿಷರು ತಮ್ಮ ದೇಶದ ಮ್ಯೂಸಿಯಂನಲ್ಲಿ ಇಟ್ಟುಕೊಂಡಿದ್ದಾರೆ. ಇದನ್ನು ಮತ್ತೆ ರಾಜ್ಯಕ್ಕೆ ತರುವ ಬಗ್ಗೆ ಸರ್ಕಾರ ಪ್ರಮಾಣಿಕವಾಗಿ ಪ್ರಯತ್ನ ಮಾಡಲಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಮೈಸೂರು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಪ್ರವಾಸೋದ್ಯಮ ಇಲಾಖೆಯ ನೂತನ 'ಬ್ರಾಂಡ್ ಮೈಸೂರು ಲೋಗೋ'ವನ್ನು ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬಿಡುಗಡೆಗೊಳಿಸಿ ಸಚಿವರು ಮಾತನಾಡಿದರು.

ಮೈಸೂರಿನ ಹಳೆಯ ಪಾರಂಪರಿಕ ಅಥವಾ ಹಳೆಯ ಕಟ್ಟಡಗಳನ್ನು ಸರ್ಕಾರವೊಂದೇ ರಕ್ಷಿಸಲು ಸಾಧ್ಯವಿಲ್ಲ. ಅದರ ರಕ್ಷಣೆಗೆ ಜನರ ಸಹಕಾರ, ಸಹಾಯ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ 500 ಸ್ಮಾರಕಗಳನ್ನು ಗುರುತಿಸಿ ರಕ್ಷಿಸುವುದರೊಂದಿಗೆ ದತ್ತು ಕೊಡುವ ಪ್ರಕ್ರಿಯೆಗೆ ಶೀಘ್ರದಲ್ಲೇ ಚಾಲನೆ ನೀಡುತ್ತೇವೆ ಎಂದರು.



ಬೆಳಗಾವಿ, ಹುಬ್ಬಳಿ, ಬಳ್ಳಾರಿಯಿಂದ ಮೈಸೂರಿಗೆ ಬರುವ ಜನರು ಅರ್ಧ ಪ್ರವಾಸಿ ತಾಣಗಳನ್ನು ನೋಡಿಕೊಂಡು ಬರುತ್ತಾರೆ. ಪ್ರವಾಸಿತಾಣಗಳನ್ನು ಧಾರ್ಮಿಕವಾಗಿಯೂ ನೋಡುತ್ತಾರೆ. ಸೋಮನಾಥಪುರ, ಹಳೆಬಿಡಿನ ಕ್ಷೇತ್ರಗಳಂತೂ ಎಲ್ಲರ ಆಕರ್ಷಣೆಗೆ ಒಳಗಾಗುತ್ತದೆ. ಕಾರಣ ಅಲ್ಲಿನ ಕಲೆ ಮತ್ತು ವಾಸ್ತುಶಿಲ್ಪ. ಇಂತಹ ಪ್ರವಾಸಿ ಕ್ಷೇತ್ರಗಳನ್ನು ರಕ್ಷಿಸಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ಮಾತನಾಡಿದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಜಿಲ್ಲೆಯಲ್ಲಿ ಕೇವಲ ಅರಮನೆ, ಝೂ ಮಾತ್ರವಲ್ಲದೇ 24ಕ್ಕೂ ಹೆಚ್ಚು ಪ್ರವಾಸೋದ್ಯಮ ಪೂರಕ ಕ್ಷೇತ್ರಗಳಿವೆ. ಇವುಗಳನ್ನು ಜಗತ್ತಿಗೆ ತೋರಿಸಬೇಕು. ಮೈಸೂರು ಪ್ರವಾಸಿಗರಿಗೆ ಸುರಕ್ಷಿತವಾಗಿದೆ ಎಂದು ತಿಳಿಸಬೇಕಿದೆ ಎಂದರಲ್ಲದೆ, ಪ್ರವಾಸೋದ್ಯಮ ತಾಣಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಜಿಲ್ಲಾಡಳಿತ ಸಿದ್ಧವಾಗಿದೆ. ಸರ್ಕಾರದ ಬಳಿಯೂ ಇದರ ಬಗ್ಗೆ ಚರ್ಚಿಸಿ, ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಮಾಹಿತಿ ನೀಡಿದರು.

ಶಕ್ತಿ ಯೋಜನೆಯ ಮೂಲಕ ಮಹಿಳೆಯರಿಗೆ ಇದೊಂದು ಒಳ್ಳೆಯ ಅವಕಾಶ. ಪ್ರವಾಸಿ ಕ್ಷೇತ್ರಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದೇವೆ. ಸ್ಮಾರಕಗಳನ್ನು ರಕ್ಷಿಸಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಶಾಸಕರು ಹಾಗೂ ಅಧಿಕಾರಿಗಳು ಗಮನಹರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ರವಿಶಂಕರ್, ದರ್ಶನ್ ಧೃವನಾರಾಯಣ್, ಮಂಜೇಗೌಡ, ಜಿ.ಪಂ, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಎಂ.ಕೆ. ಸವಿತಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯಿತ್ರಿ, ಪುರಾತತ್ವ ಇಲಾಖೆಯ ಆಯುಕ್ತ ದೇವರಾಜು, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್ ಮುಂತಾದವರು ಹಾಜರಿದ್ದರು.

---

## ಡಿ. 14ರಂದು ಗಜೇಂದ್ರಗಡದಲ್ಲಿ ಜನತಾ ದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ



ಡಿಸೆಂಬರ್ 14 ರಂದು ಬೆಳಿಗ್ಗೆ 11 ಗಂಟೆಗೆ ಗಜೇಂದ್ರಗಡ ಪುರಸಭೆ ಕಾರ್ಯಾಲಯದ ಸಭಾಭವನದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರ ಅಧ್ಯಕ್ಷತೆಯಲ್ಲಿ ಜನತಾದರ್ಶನ ಕಾರ್ಯಕ್ರಮ ಜರುಗಲಿದೆ. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಗಜೇಂದ್ರಗಡ ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2023–24ನೇ ಸಾಲಿಗೆ ಹೊಸದಾಗಿ ಮತ್ತು ನವೀಕರಣಕ್ಕೆ 1 ರಿಂದ 8ನೇ ತರಗತಿ ವ್ಯಾಸಾಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವರ್ಗದವರು ಎಸ್.ಎಸ್.ಪಿ. ವಿದ್ಯಾರ್ಥಿ ವೇತನಕ್ಕಾಗಿ https://ssp.postmatric.karnataka.gov.in/ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನವನ್ನು ಡಿಸೆಂಬರ್ 20 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಮಿತ್ ಬಿದರಿ ಆರ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಕೇಂದ್ರ ಗದಗ, ಶಿರಹಟ್ಟಿ–9591705863, ಮುಂಡರಗಿ–9916689778, ನರಗುಂದ 9901501170, ರೋಣ–9964490088 ಸಂಪರ್ಕಿಸ ಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

**ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ನ್ಯಾಯಮೂರ್ತಿ ಕೆ. ಗುರುಪ್ರಸಾದ**

# ಮಾನವ ಹಕ್ಕು ಉಲ್ಲಂಘನೆಯಾದಲ್ಲಿ ದೂರು ದಾಖಲಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮಾಜದಲ್ಲಿ ಮಾನವ ಹಕ್ಕು ಉಲ್ಲಂಘನೆಯಂತಹ ಘಟನೆಗಳು ನಡೆದ ಒಂದು ವರ್ಷದೊಳಗೆ ಸಂಬಂಧಿಸಿದ ದಾಖಲೆಗಳೊಂದಿಗೆ ರಾಜ್ಯ ಅಥವಾ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ದೂರು ದಾಖಲಿಸಿ ನ್ಯಾಯ ಕಂಡುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಹೇಳಿದರು.

ಗದಗ ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ ರವಿವಾರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಆಶ್ರಯದಲ್ಲಿ ಜರುಗಿದ 'ಮಾನವ ಹಕ್ಕುಗಳ ದಿನಾಚರಣೆ' ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾನವ ಹಕ್ಕು ಪ್ರಕರಣಗಳು ಹೆಚ್ಚಾಗಿ ಸರ್ಕಾರಿ ಸಂಸ್ಥೆಗಳಲ್ಲಿ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಕಾರಾಗೃಹಗಳಲ್ಲಿ ಕಂಡುಬರುತ್ತವೆ. ಮಾನವನಿಗೆ ಸಮಾಜದಲ್ಲಿ ಘನತೆಯಿಂದ ಜೀವಿಸಲು ಅಗತ್ಯವಿರುವ ಎಲ್ಲ ಕಾನೂನಾತ್ಮಕ ಹಕ್ಕುಗಳೂ ಸಹ ಮಾನವ ಹಕ್ಕುಗಳಾಗಿವೆ. ಇವುಗಳಿಗೆ ಧಕ್ಕೆ ಬಂದಲ್ಲಿ ಆಯೋಗದಲ್ಲಿ ದೂರು ದಾಖಲಿಸಿ ನ್ಯಾಯ ಪಡೆಯಬೇಕು ಎಂದು ಹೇಳಿದರು.



ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮಾತನಾಡಿ, ಸಂವಿಧಾನದಲ್ಲಿ 6 ಮೂಲಭೂತ ಹಕ್ಕುಗಳು ಇವೆ. ಮಾನವ ಹಕ್ಕುಗಳು ತುಂಬಾ ಇವೆ. ಅವೆಲ್ಲವೂ ಸಹ ಮಾನವರು ಘನತೆಯಿಂದ ಜೀವಿಸಲು ಸಹಕಾರಿಯಾಗಿವೆ. ಈ ವರ್ಷದ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಘೋಷವಾಕ್ಯವನ್ನು ನೀಡಲಾಗಿದ್ದು 'ಸಮಾನತೆ, ಸ್ವಾತಂತ್ರ್ಯ, ಎಲ್ಲರಿಗೂ ನ್ಯಾಯ ಒದಗಿಸೋಣ' ಎಂಬುದಾಗಿದೆ ಎಂದರು.

ಸಮಾಜದ ಪ್ರತಿ ನಾಗರಿಕನು ಮಾನವ ಹಕ್ಕುಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ತಿಳಿಯಬೇಕು. ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಸಂಭವಿಸದಂತೆ ಅಥವಾ ಮರುಕಳಿಸದಂತೆ ಪ್ರಜ್ಞಾವಂತ ನಾಗರಿಕರಾಗಿ ನಾವೆಲ್ಲರೂ ಜಾಗೃತಿ ವಹಿಸಬೇಕಾಗಿದೆ. ಜೀವನದ ಸ್ವಾತಂತ್ರ್ಯದ ಸಮಾನತೆಯ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳೇ ಮಾನವ ಹಕ್ಕುಗಳು. ಎಲ್ಲ ಮಾನವ ಜೀವಿಗಳು ಹುಟ್ಟಿನಿಂದ ಘನತೆ ಮತ್ತು ಹಕ್ಕುಗಳಲ್ಲಿ ಸಮಾನರು ಮತ್ತು ಪ್ರತಿಯೊಬ್ಬರೂ ಯಾವುದೇ ತರಹದ ತಾರತಮ್ಯವಿಲ್ಲದ ಹಕ್ಕುಗಳನ್ನು ಮತ್ತು ಸ್ವಾತಂತ್ರವನ್ನು ಹೊಂದುವ ಕಾನೂನುಬದ್ಧ ಹಕ್ಕು ಹೊಂದಿರುತ್ತಾರೆ ಎಂದರು.

ನಿವೃತ್ತ ನ್ಯಾಯಮೂರ್ತಿ ಎಸ್.ಜಿ. ಪಲ್ಲೇದ ಮಾತನಾಡಿ, ಮಾನವ ಹಕ್ಕುಗಳ ರಕ್ಷಣೆ, ಸಮಾಜದಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ನಾಗರಿಕರ ಕರ್ತವ್ಯಗಳನ್ನು ಅರಿಯುವ ಜಾಗೃತಿ ಕಾರ್ಯಕ್ರಮ ಇದಾಗಿದೆ. ಮನುಷ್ಯ ಮನುಷ್ಯನನ್ನು ಪ್ರೀತಿ, ಗೌರವ, ಆದರ, ಘನತೆಯಿಂದ ಕಾಣುವುದು ಮಾನವ ಹಕ್ಕುಗಳ ರಕ್ಷಣೆ–ಯಾಗುತ್ತದೆ. ದೌರ್ಜನ್ಯ ಎಸಗುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಈ ಮಾನವ ಹಕ್ಕುಗಳ ಉಲ್ಲಂಘನೆ ಮೊದಲು ಆರಂಭವಾಗುವುದೇ ಕುಟುಂಬ ಹಾಗೂ ನೆರೆಹೊರೆಯ ಸಮಾಜದಿಂದ. ನಾವೆಲ್ಲರೂ ಸಮಾಜದ ಸರ್ವರೊಂದಿಗೂ ಪ್ರೀತಿ, ವಿಶ್ವಾಸ, ಗೌರವದಿಂದ ನಡೆದುಕೊಳ್ಳುವ ಮೂಲಕ ಒಬ್ಬರಿಗೊಬ್ಬರು ಅನ್ಯೋನ್ಯತೆಯಿಂದ ಜೀವಿಸಬೇಕು ಎಂದರು.

ಮಾನವ ಹಕ್ಕುಗಳ ಆಯೋಗವು ಉಲ್ಲಂಘನೆ ಪ್ರಕರಣಗಳ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ಮಾನವ ಹಕ್ಕುಗಳ ಉಲ್ಲಂಘನೆ ಖಚಿತವಾದಲ್ಲಿ ಅವುಗಳ ಬಗ್ಗೆ ಸಂಪೂರ್ಣವಾದ ಶಿಫಾರಸ್ಸು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅಲ್ಲಿಂದ ಶಿಫಾರಸ್ಸು ವರದಿಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಮಾನವ ಹಕ್ಕುಗಳ ಕುರಿತು ಕೆ. ಗುರುಪ್ರಸಾದ ಸುದೀರ್ಘವಾಗಿ ವಿವರಣೆಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಮಾನವ ಹಕ್ಕುಗಳ ಪ್ರತಿಜ್ಞಾ ವಿಧಿಯನ್ನು ನೆರೆದ ಸಾರ್ವಜನಿಕರಿಗೆ, ಮಕ್ಕಳಿಗೆ, ಇಲಾಖೆಯ ಅಧಿಕಾರಿ, ಸಿಬ್ಬಂದಿಗಳಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಬೋಧಿಸಿದರು. ಗದಗ–ಬೆಟಗೇರಿ ನಗರಸಭೆಯ ಉಪಾಧ್ಯಕ್ಷೆ ಸುನಂದಾ ಬಾಕಳೆ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮಂಜರಿ ಹೊಂಬಾಳಿ ಕಾರ್ಯಕ್ರಮ ನಿರ್ವಹಿಸಿದರು.

## ಸಂಪಾದಕೀಯ

### ಸುಳ್ಳು ಸುದ್ದಿಗೆ ಬೇಕು ನಿಯಂತ್ರಣ

ಜಗತ್ತಿನಾದ್ಯಂತ ಈಗ ಸುಳ್ಳು ಸುದ್ದಿಗಳದ್ದೆ ಹಾವಳಿ. ಅದರ ಜೊತೆಗೆ ಕೃತಕ ಬುದ್ದಿಮತ್ತೆ ಬಳಸಿಕೊಂಡು ಡೀಪ್ ಫೇಕ್ ನಂತಹ ವಿಡಿಯೋಗಳು ಸೇರಿಕೊಂಡಿರುವುದು ಡಿಜಿಟಲ್ ಜಗತ್ತಿನ ಬಗ್ಗೆ ಅಸಹ್ಯ ಮತ್ತು ಅನುಮಾನ ಮೂಡಿಸುವಂತಾಗಿದೆ.

ರಾಜಕೀಯ ಸುದ್ದಿಗಳ ನಿಜರೂಪವನ್ನು ಬದಲಿಸುವ ಬರೆಯುವಂಥ ಪ್ರವೃತ್ತಿಯಿಂದ ಆರಂಭವಾದ ಸುಳ್ಳು ಸುದ್ದಿ, ಮುಂದೆ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿತು. ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಸುದ್ದಿಗಳೇ ಹೆಚ್ಚು ಪ್ರಚಾರಗೊಳ್ಳುತ್ತಿವೆ. ಸಾಮಾಜಿಕ ಮಾಧ್ಯಮದಲ್ಲಿ ಬಂದಿದ್ದೆಲ್ಲವನ್ನು ನಂಬುವ ಜನ ಹಿಂದೆ ಮುಂದೆ ನೋಡದೆ ಅಂಥ ಸುದ್ದಿಗಳನ್ನು ಒಪ್ಪಿಕೊಂಡರು. ಅಪ್ಪಿಕೊಂಡರು. ಕೆಲವರು ಮುಂದೆ ಹೋಗಿ ಅವುಗಳಿಗೆ ಪ್ರತಿಸ್ಪಂದನೆಯನ್ನೂ ವ್ಯಕ್ತಪಡಿಸಿದರು.

ಇವತ್ತು ಸುಳ್ಳು ಸುದ್ದಿಗಳ ಜಾತ್ರೆಯಲ್ಲಿ ನೈಜ ಸುದ್ದಿಯನ್ನು ಹುಡುಕುವುದೇ ಸವಾಲಾಗಿದೆ. ಅದಕ್ಕಾಗಿಯೇ ರಾಜ್ಯ ಸರಕಾರ ಸುಳ್ಳು ಸುದ್ದಿ ಪತ್ತೆಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು, ಅವುಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಚಿಂತನೆ ನಡೆಸಿದೆ.

ಇದು ಕೇವಲ ಕರ್ನಾಟಕದಲ್ಲಿ ಮಾತ್ರ ಆಗಬೇಕಾದ ಕೆಲಸ ಅಲ್ಲ. ಜಗತ್ತಿನಾದ್ಯಂತ ಇಂಥ ಸುಳ್ಳು ಪತ್ತೆಗಾಗಿ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಹಾಗೆ ಸುಳ್ಳು ಸುದ್ದಿ ಸೃಷ್ಟಿಯ ತಂತ್ರಜ್ಞಾನವನ್ನು ಬಳಸಿಕೊಂಡು ನೈಜ ಸುದ್ದಿ ಪತ್ತೆ ಮಾಡುವ ತಾಂತ್ರಿಕತೆ, ತಂತ್ರಜ್ಞಾನ ಜನಮಾನಸವನ್ನು ತಲುಪಬೇಕಿದೆ.

ಗೂಗಲ್ ಸಹಿತ ಅನೇಕ ದೊಡ್ಡ ದೊಡ್ಡ ತಂತ್ರಜ್ಞಾನದ ಕಂಪನಿಗಳು ಸುಳ್ಳು ಸುದ್ದಿ ಪತ್ತೆಗೆ ನೆರವಾಗುತ್ತಿವೆ. ಆದರೆ ಅವುಗಳನ್ನು ಬಳಸಿ, ನೈಜ ಸುದ್ದಿಯನ್ನು ಅರಿಯುವ ತಾಳ್ಮೆ ಮತ್ತು ಇಚ್ಛಾಶಕ್ತಿ ಯಾರಲ್ಲಿಯೂ ಇಲ್ಲ. ಸುಳ್ಳು ಸುದ್ದಿ ಕೊಡುವ ಮನರಂಜನೆ, ಪ್ರಚೋದನೆಗೆ ಒಳಗಾಗಿ ಪ್ರತಿಕ್ರಿಯಿಸುವ ಜನ, ಒಂದು ಕ್ಷಣ ಆ ಸುದ್ದಿಯ ಸತ್ಯಾಸತ್ಯತೆ ಅರಿಯುವ ಪ್ರಯತ್ನ ಮಾಡುವುದಿಲ್ಲ.

ಹೀಗಾಗಿ ಫ್ಯಾಕ್ಟ್ ಚೆಕ್ ಎನ್ನುವುದು ಕೇವಲ ಸರಕಾರದ ಕೆಲಸ ಮಾತ್ರವಲ್ಲ, ಅದು ಸಮಾಜದ ಜವಾಬ್ದಾರಿಯೂ ಹೌದು. ಮೊನ್ನೆಯಷ್ಟೆ ಸಂಸದೆಯೊಬ್ಬರು ಲಂಚ ಪಡೆದ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಲಾಗಿದೆ. ಲೋಕಸಭೆಯಿಂದ ಹೊರಹೋಗಲು ನಿರಾಕರಿಸಿದ ಮಹಿಳಾ ಸಂಸದರೊಬ್ಬರನ್ನು ಪೊಲೀಸರು ಎಳೆದುಕೊಂಡು ಹೋದ ದೃಶ್ಯಾವಳಿಗಳು ದೇಶಾದ್ಯಂತ ಸಂಚಲವನ್ನೆ ಸೃಷ್ಟಿಸಿತು. ಅಸಲಿಗೆ ಸಂಸದೆ ಉಚ್ಚಾಟನೆಯಾಗಿದ್ದು ನಿಜ. ಆದರೆ ಅವರು ತಾವಾಗಿಯೇ ಲೋಕಸಭೆಯಿಂದ ಹೊರನಡೆದರು. ಆದರೆ ಅವರು ಈ ಹಿಂದೆ ಪ್ರತಿಭಟನೆಯೊಂದರಲ್ಲಿ ಭಾಗಿಯಾಗಿದ್ದಾಗ ಪೊಲೀಸರು ಎಳೆದೊಯ್ದ ವಿಡಿಯೋವನ್ನೆ ಅಮಾನತ್ತಾದ ಸಂದರ್ಭಕ್ಕೆ ಜೋಡಿಸಿದ್ದು ಫ್ಯಾಕ್ಟ್ ಚೆಕ್ ನಿಂದ ಬಹಿರಂಗಗೊಂಡಿದೆ.

ಸದ್ಯ ವಿಡಿಯೋದ ಸತ್ಯಾಸತ್ಯತೆ ಹೊರಬಂದಿದೆ. ಆದರೂ ಈಗಲೂ ಜನ ಸಂಸದೆಯನ್ನು ಪೊಲೀಸರು ಎಳೆದೊಯ್ದರು ಎಂದೇ ನಂಬಿದ್ದಾರೆ. ಪೊಲೀಸರು ಕೃತ್ಯವನ್ನು ಅನೇಕ ಮಹಿಳೆಯರು ಖಂಡಿಸಿದ್ದಾರೆ. ಅಮಾನವೀಯ ನಡೆ ಎಂದು ಟೀಕಿಸಿದ್ದಾರೆ. ಅಸಲಿಗೆ ಅವರಿಗೆ ಇದು ಹಳೆಯ ವಿಡಿಯೋ ಎಂದು ಭಾವಿಸಿಯೇ ಇಲ್ಲ. ಅಥವಾ ಅವರು ಆ ಸುದ್ದಿಯನ್ನು ನೈಜತೆಯನ್ನು ನೋಡುವ ಪ್ರಯತ್ನ ಮಾಡಿಲ್ಲ. ಹೀಗಾಗಿ ನಾವೆಲ್ಲರೂ ಇಂಥ ಸುಳ್ಳು ಸುದ್ದಿಗಳ ಬಗ್ಗೆ ಜಾಗೃತಿ ವಹಿಸುವ ಜೊತೆಗೆ ಸುಳ್ಳು ಸುದ್ದಿಯ ತಂತ್ರಜ್ಞಾನದ ನೆರವು ಪಡೆಯುವ, ಬಳಸುವ ಔದಾರ್ಯ ಬೆಳಸಿಕೊಳ್ಳಬೇಕಿದೆ.

ಡಿಜಿಟಲ್ ಕಾಲದಲ್ಲಿ ಫ್ಯಾಕ್ಟ್ ಚೆಕ್ ಅಗತ್ಯ ಮತ್ತು ಅನಿವಾರ್ಯವೂ ಹೌದು.

### ಬದುಕಿನುದ್ದಕ್ಕೂ ನೋವನ್ನುಂಡು, ತಮ್ಮ ವಿಭಿನ್ನ ನಟನೆಯೊಂದಿಗೆ ಮರೆಯಾದ ತಾರೆ

# ಚಂದನವನದ ನಂದಾದೀಪ ಲೀಲಾವತಿ

'ಸಾಧಕರ ಬದುಕು ಯಾವಾಗಲೂ ಕೂಡ ಕಷ್ಟಗಳೊಂದಿಗೆ ಕೂಡಿರುತ್ತದೆ' ಎಂಬ ಮಾತು ಸಾರ್ವಕಾಲಿಕ ಸತ್ಯ. ಇದಕ್ಕೆ ಲೀಲಾವತಿಯವರು ಕೂಡ ಹೊರತಾಗಿಲ್ಲ. ಚಂದನವನ ಕಂಡ ನಂದಾದೀಪ ಇವರು. 85ರ ಇಳಿ ವಯಸ್ಸಿನಲ್ಲಿ ತಮ್ಮ ಮಗ ವಿನೋದ್ ರಾಜಕುಮಾರ್ ಸೇರಿದಂತೆ ಅಪಾರ ಅಭಿಮಾನಿ ಬಳಗವನ್ನು ಅಗಲಿದ್ದಾರೆ. ತಂದೆ-ತಾಯಿಯನ್ನು ಚಿಕ್ಕವಯಸಿನಲ್ಲೇ ಕಳೆದುಕೊಂಡು ನಾಟಕ ಕಂಪನಿಗಳಲ್ಲಿ ಕೆಲಸ ಮಾಡುತ್ತಾ ನಟನೆಯನ್ನೇ ಒಂದು ಸವಾಲಾಗಿ ಸ್ವೀಕರಿಸಿ, ಚಿತ್ರರಂಗದಲ್ಲಿ ವಿವಿಧ ಪಾತ್ರಗಳನ್ನು ಲೀಲಾಜಾಲವಾಗಿ ತಮ್ಮ ನಟನೆಯ ಮೂಲಕ ಭಾವನಾತ್ಮಕವಾಗಿ ಚಿತ್ರರಸಿಕರ ಮನಸೂರೆಗೊಂಡ ಲೀಲಾ ಕಿರಣ್‌ರವರು ಲೀಲಾವತಿಯಾಗಿ ಬೆಳೆದದ್ದು ಈಗ ಇತಿಹಾಸ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ 1938ರಲ್ಲಿ ಜನಿಸಿದ ಲೀಲಾವತಿಯವರು ಇದುವರೆಗೂ ಕನ್ನಡ, ತಮಿಳು, ತೆಲುಗು, ಮಲಯಾಳಂ, ತುಳು ಸೇರಿದಂತೆ 600 ಚಿತ್ರಗಳಲ್ಲಿ ನಟಿಸಿದ್ದಾರೆ. ತಮ್ಮ 11ನೇ ವಯಸ್ಸಿನಲ್ಲಿಯೇ 1949ರಲ್ಲಿ ಶಂಕರ್ ಸಿಂಗ್ ಅವರ ನಾಗಕನ್ನಿಕ ಚಿತ್ರದಲ್ಲಿ ಸಖೀ ಪಾತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶ ಮಾಡಿದರು. ಅಲ್ಲದೇ ಸುಬ್ಬಯ್ಯ ನಾಯ್ಡು ಮತ್ತು ಮಹಾಲಿಂಗ ಭಾಗವತರ ಸಂಸ್ಥೆಗಳಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸುವ ಮೂಲಕ ತಮ್ಮ ಕಲೆಗೆ ಅಡಿಪಾಯ ಹಾಕಿದರು.

ಡಾ ರಾಜಕುಮಾರ್ ಅವರೊಂದಿಗೆ ನಟಿಸಿದ ಮೊದಲ ಚಿತ್ರ ರಣಧೀರ ಕಂಠೀರವ. ರಾಣಿ ಹೊನ್ನಮ್ಮ ಚಿತ್ರದ ಯಶಸ್ಸಿನ ನಂತರ ರಾಜ್-ಲೀಲಾವತಿ ಜೋಡಿ 60 ಮತ್ತು 70ರ ದಶಕದಲ್ಲಿ ಬಹಳ ಪ್ರಸಿದ್ಧಿ ಪಡೆಯಿತು. ರಾಜಕುಮಾರ್‌ರೊಂದಿಗೆ 45ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

ಸಾತ್ವಿಕ ಪಾತ್ರಗಳಲ್ಲಿ ಅಮ್ಮನಾಗಿ ಪ್ರಸಿದ್ಧಿ ಪಡೆದ ಪಂಡರಿಬಾಯಿ ಅವರ ನಂತರ ಪ್ರಿಯತಮೆಯಾಗಿ, ಮಡದಿಯಾಗಿ, ತಾಯಿಯಾಗಿ, ಅತ್ತೆಯಾಗಿ, ಸಹೋದರಿಯಾಗಿ ಮಮತೆ, ಕರುಣೆ, ವಾತ್ಸಲ್ಯ, ತ್ಯಾಗಮಯಿ, ಬಿಂಕದ ಸಿಂಗಾರಿ, ದರ್ಪ, ಹಾಸ್ಯ, ಗಂಭೀರ, ಅಸೂಯೆ ಮುಂತಾದ ಪಾತ್ರಗಳ ಮೂಲಕ ಕನ್ನಡ ಚಿತ್ರರಂಗದ ಎರಡನೆಯ ಅಮ್ಮ ಎಂದೆನಿಸಿದ್ದಾರೆ. ಪ್ರತಿಯೊಂದು ಚಿತ್ರದ ಪಾತ್ರಗಳಲ್ಲೂ ಕೂಡ ತಲ್ಲೀನತೆಯೊಂದಿಗೆ ನಟಿಸುತ್ತಿದ್ದ ಲೀಲಾವತಿಯವರ ನಟನೆಯ ಚಿತ್ರಗಳನ್ನು ವೀಕ್ಷಿಸುವುದೇ ಒಂದು ರೀತಿಯಲ್ಲಿ ಹೆಮ್ಮೆ.

ಪುತ್ರ ವಿನೋದ್ ರಾಜ್ ನಟಿಸಿದ 'ಯಾರದು?' ಚಿತ್ರದ ಮೂಲಕ 2009ರಲ್ಲಿ ನಟನೆಯನ್ನು ನಿಲ್ಲಿಸಿದರು. ನಂತರದಲ್ಲಿ ಅವರು ತಮ್ಮ ಪುತ್ರನೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಸಮೀಪ ಸೋಲದೇವನಹಳ್ಳಿಯಲ್ಲಿಯ ಫಾರ್ಮ್‌ಹೌಸ್‌ನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದರು. ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡರು.



ಮುಖ್ಯವಾಗಿ ಸೋಲದೇವನಹಳ್ಳಿಯ ಜನರಿಗೆ ಆಸ್ಪತ್ರೆಯನ್ನು ಕಟ್ಟಿಸಿದರು. ಇದರೊಂದಿಗೆ ತಮ್ಮ ಇಳಿ ವಯಸ್ಸಿನಲ್ಲೂ ಕೂಡ ಲವಲವಿಕೆಯಿಂದ ಇದ್ದರು.

ಅವರು ನಟಿಸಿರುವ ಚಿತ್ರಗಳಲ್ಲಿ ಚಿತ್ರಗೀತೆಗಳು ಕೂಡ ಪ್ರಮುಖ ಪಾತ್ರ ವಹಿಸಿವೆ. ಅಲ್ಲೊಂದು ಲೋಕ ಉಂಟು, ಯುಗ ಯುಗಾದಿ ಕಳೆದರೂ, ಬಿಂಕದ ಸಿಂಗಾರಿ, ಗಗನವು ಎಲ್ಲೋ ಭೂಮಿಯು ಎಲ್ಲೋ, ಪಂಚಮ ವೇದ ಪ್ರೇಮದ ನಾದ, ಅಮ್ಮ ನೀನು ನಕ್ಕರೆ ನಮ್ಮ ಬಾಳು ಸಕ್ಕರೆ, ಹೀಗೆ ಪಟ್ಟಿ ಬೆಳೆಯುತ್ತದೆ.

ಕನ್ನಡ ಚಿತ್ರರಂಗ ಕಂಡ ಧೀಮಂತ ನಟಿ ಲೀಲಾವತಿಯವರ ಸಾಧನೆಗೆ ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಮದುವೆ ಮಾಡಿ ನೋಡು, ಸಂತ ತುಕಾರಾಂ ಸಿನಿಮಾಗಳಿಗೆ ಎರಡು ಬಾರಿ ರಾಷ್ಟ್ರಪ್ರಶಸ್ತಿ ಸಂದಿದೆ. ತುಂಬಿದ ಕೊಡ, ಮಹಾತ್ಯಾಗ, ಭಕ್ತ ಕುಂಬಾರ, ಸಿಪಾಯಿ ರಾಮು, ಗೆಜ್ಜೆಪೂಜೆ ಚಿತ್ರದ ಮನೋಜ್ಞ ಅಭಿನಯಕ್ಕೆ ರಾಜ್ಯ ಪ್ರಶಸ್ತಿ ಬಂದಿದೆ. ಕನ್ನಡದ ಕಂದ ಚಿತ್ರದ ಪೋಷಕ ನಟಿಗೆ ಫಿಲಂಫೇರ್ ಪ್ರಶಸ್ತಿ ಕೂಡ ಸಂದಿದೆ.

2008ರಲ್ಲಿ ತುಮಕೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿದೆ. 1999-2000ನೇ ಸಾಲಿನಲ್ಲಿ ಚಿತ್ರರಂಗದ ಜೀವಮಾನ ಸಾಧನೆಗಾಗಿ ಡಾ. ರಾಜಕುಮಾರ್ ಪ್ರಶಸ್ತಿ ಸಂದಿದೆ. ಇನ್ನು ಕೊನೆಯದಾಗಿ, ಈ ಸಂದರ್ಭದಲ್ಲಿ ವಿನೋದ ರಾಜ್‌ರನ್ನು ನೆನಪಿಸಿಕೊಳ್ಳಲೇಬೇಕು. ತಮ್ಮ ತಾಯಿಯ ಆರೋಗ್ಯದ ಬಗ್ಗೆ ಬಹಳ ಮುತುವರ್ಜಿ ವಹಿಸಿ ನೋಡಿಕೊಂಡು ಅವರ ಕೊನೆಯ ಆಸೆಯನ್ನು ಕೂಡ ನೆರವೇರಿಸಿದ್ದಾರೆ. ಈ ತಾಯಿ-ಮಗನ ಪ್ರೀತಿ ಮರೆಯಲಾಗದು. ಅಳಿದ ಮೇಲೂ ಉಳಿಯುವ ಸಾಧನೆ ಮಾಡಿದ ಲೀಲಾವತಿಯವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ನೀಡಲಿ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

**- ಕಾಳಿಹುಂಡಿ ಶಿವಕುಮಾರ್.**
ಮೈಸೂರು.

# ಯೋಗೀರಾಜರ 2ನೇ ದಿನದ ಪುಣ್ಯಾರಾಧನೆ

**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿಯ ವಿದ್ಯಾಶಂಕರ ದೇವಸ್ಥಾನದಲ್ಲಿ ಕಳೆದ ಎರಡು ದಿನದಿಂದ ನಡೆಯುತ್ತಿರುವ ಯೋಗಿರಾಜ ಮಹಾರಾಜರ 102ನೇ ಪುಣ್ಯಾರಾಧನಾ ಮಹೋತ್ಸವದಲ್ಲಿ ಬಾಗಲಕೋಟ ಜಿಲ್ಲೆಯ ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದ ಅನಂತ ಕುಲಕರ್ಣಿಯವರು ತಮ್ಮ ಸಿರಿ ಕಂಠದಿಂದ ಹಾಡಿದ ದಾಸರು, ಶರಣರು ರಚಿಸಿದ ಭಕ್ತಿಗೀತೆಗಳು ಸೇರಿದ ನೂರಾರು ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸಿತು.



ಅನಂತ ಕುಲಕರ್ಣಿಯವರ ಹಾಡಿಗೆ ತಬಲಾ ಸಾಥ್ ನೀಡಿದ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಮಧು ಅಚ್ಯುತ್‌ರಾವ್ ಕೊಪ್ಪ ಅವರು ತಬಲಾ ಸಂಗೀತ ಸೇರಿದ ಭಕ್ತರ ಮನ ಸೆಳೆಯಿತು. ಗದಗ ಕರಿಯಮ್ಮಕಲ್ಲು ಬಡವಾಣಿಯ ಕರಿ ಭಜನಾ ಮಂಡಳದ ಮಹಿಳೆಯರು ಶಂಕರಾಚಾರ್ಯರ ಶ್ಲೋಕ, ಪುರಂದರ ದಾಸರ ಹಾಡುಗಳನ್ನು ಪ್ರಸ್ತುತಪಡಿಸಿದರು. ಹುಬ್ಬಳ್ಳಿಯ ಶಾರದಾ ಮಹಿಳಾ ಕುಂಜ ಶಂಕರ ಮಠದ ಮಹಿಳೆಯರು ಸೌಂದರ್ಯ ಲಹರಿ ಪಠಣ ಮಾಡಿದರು. ವಿಶ್ವನಾಥ ಕುಲಕರ್ಣಿ ಅವರಿಂದ ಗಮಕ ವಾಚನ, ಕುರ್ತುಕೋಟಿಯ ದಿಗಂಬರ ಶಾಸ್ತ್ರಿಗಳಿಂದ ಕೀರ್ತನೆ ಜರುಗಿತು.

ನಂತರ ಗದಗ ಆಧ್ಯಾತ್ಮ ವಿದ್ಯಾಶ್ರಮದ ನೀಲಮ್ಮತಾಯಿಯವರಿಂದ ಪ್ರವಚನ ಹಾಗೂ ಶ್ರೀಕಾಂತ ಹೂಲಿ ಮತ್ತು ಉಮೇಶ ಪಾಟೀಲ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನೆರವೇರಿತು.

ಇದಕ್ಕೂ ಪೂರ್ವ ಕಾಕಡಾರತಿಯೊಂದಿಗೆ 2ನೇ ದಿನದ ಆರಾಧನೆಯು ಆರಂಭವಾಯಿತು. 25 ಜನ ವಿಪ್ರರು ಪಾಲ್ಗೊಂಡು ಮಂತ್ರಘೋಷಗಳೊಂದಿಗೆ ವಿದ್ಯಾಶಂಕರ ಮೂರ್ತಿಗೆ ಲಘು ರುದ್ರಾಭಿಷೇಕ ನೆರವೇರಿಸಿದರು.

ನಂತರ ಪಾಂಡುರಂಗ ಗೋಡಖಿಂಡಿ ಭಟ್ಟರು ಸೇರಿದಂತೆ 12 ಜನ ವಿಪ್ರರು ವಿಶೇಷವಾದ ಅಲಂಕಾರ ಪೂಜೆಯ ವಿಧಿ-ವಿದಾನಗಳೊಂದಿಗೆ ನೆರವೇರಿಸಿದರು.

# ಯೋಗಿಪುರುಷ ಯೋಗಿರಾಜರ ಆರಾಧನೆ



**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಯೋಗಿಪುರುಷ ಯೋಗಿರಾಜ ಮಹಾರಾಜರ 102ನೇ ಪುಣ್ಯಾರಾಧನಾ ಮಹೋತ್ಸವದ ಮೊದಲ ದಿನದ ಕಾರ್ಯಕ್ರಮವು ವಿಧಿ-ವಿಧಾನಗಳೊಂದಿಗೆ ಆರಂಭವಾಯಿತು.

ಇಲ್ಲಿಯ ವಿದ್ಯಾಶಂಕರ ದೇವಸ್ಥಾನದಲ್ಲಿ ಹಮ್ಮಿಕೊಂಡ ಆರಾಧನಾ ಮಹೋತ್ಸವದಲ್ಲಿ ಸದ್ಗುರುಗಳ ಪಾದುಕೆಯನ್ನು ಯೋಗಿರಾಜರ ಆರಾಧ್ಯ ದೇವರಾದ ಕನ್ಯೆಯರ ಭಾವಿಯಲ್ಲಿರುವ ಹನುಮಪ್ಪ ದೇವರ ದರ್ಶನದೊಂದಿಗೆ ಪೂಜೆ ನೆರವೇರಿಸಲಾಯಿತು.

ಗದುಗಿನ ಮಂಜುನಾಥ ದೊನ್ನಿ ಭಟ್ಟರ ನೇತೃತ್ವದ ವಿಪ್ರರ ವೃಂದದವರು ಗಣಪತಿ ಸಹಸ್ರ ಮೋದಕ ಹೋಮ ನೆರವೇರಿಸಿದರು. ವೇದಿಕೆಯಲ್ಲಿ ನಡೆದ ಭಕ್ತಿ ಸಂಗೀತ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ವಿಭಾವರಿ ಭಜನಾ ಮಂಡಳಿಯಿಂದ ವಿವಿಧ ಭಜನೆ, ಸೋತ್ರ ಪಠಣ ಜರುಗಿತು. ನಂತರ ಬೆಂಗಳೂರಿನ ವಸುಧೇಂದ್ರ ವೈದ್ಯ ಹಾಗೂ ತಂಡದವರ ಭಕ್ತಿ ಸಂಗೀತ ಧಾರವಾಡ ತಾರಕೇಶ್ವರ ಭಜನಾ ಮಂಡಳಿಯ ಸಾಮೂಹಿಕ ಭಜನೆ, ಬೆಂಗಳೂರಿನ ಗೌರಿ ಅರುಣ ಕುಲಕರ್ಣಿ ಅವರ ಭಕ್ತಿ ಸಂಗೀತ, ಗುರುವಿನಹಳ್ಳಿಯ ವಿಶ್ವನಾಥ ಕುಲಕರ್ಣಿ ಅವರ ಗಮಕ ವಾಚನವು ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸಿತು.

ಕುರ್ತುಕೋಟಿಯ ಕೀರ್ತನ ಕೇಸರಿ ದಿಗಂಬರಶಾಸ್ತ್ರೀ ಮಹಾಭಾರತ ಕಥನದ ಕೀರ್ತನೆ ನಡೆಸಿಕೊಟ್ಟರು.

### ಹಿರೇಮಠದ ಜಾತ್ರಾ ಮಹೋತ್ಸವದ 9ನೇ ದಿನದ ಕಾರ್ಯಕ್ರಮದಲ್ಲಿ ಗಂಗಾಧರ ಶ್ರೀಗಳು

# ಬಾಗಿ ನಡೆಯುವುದೇ ಶರಣ ಸಂಸ್ಕೃತಿ

**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಜೀವನದಲ್ಲಿ ನಾವು ಶರಣ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಸಮಾಜದಲ್ಲಿ ಬೀಗಿ ನಡೆಯದೆ ಬಾಗಿ ನಡೆಯುವುದನ್ನು ರೂಢಿಸಿಕೊಂಡರೆ ಅದನ್ನೇ ಶರಣ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಅಂತಹ ಗುಣವನ್ನು ನೀವೆಲ್ಲ ಬೆಳೆಸಿಕೊಳ್ಳಬೇಕೆಂದು ಕೊತಬಾಳದ ಅಂಕಲಿಮಠದ ಶ್ರೀ ಗಂಗಾಧರ ಮಹಾಸ್ವಾಮಿಗಳವರು ಹೇಳಿದರು.

ನರೇಗಲ್ಲ ಹಿರೇಮಠದ ಜಾತ್ರಾ ಮಹೋತ್ಸವದ 9ನೇ ದಿನದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶರಣರ ಬದುಕು ಎಂದಿಗೂ ಆದರ್ಶಮಯುವಾಗಿರುತ್ತದೆ. ಸರಳವಾದ ಬದುಕನ್ನೇ ಶರಣರ ಬದುಕು ಎನ್ನುತ್ತಾರೆ.




ಜೀವನದಲ್ಲಿ ಏನೇ ಕಷ್ಟ-ನಷ್ಟಗಳು ಬಂದರೂ ಕುಗ್ಗದೆ ಜೀವನದಲ್ಲಿ ಮುನ್ನಡೆಯುವವನು ನಿಜವಾದ ಶರಣ. ಅತ್ಯಂತ ಶಾಂತ ಮತ್ತು ವಿದ್ವತ್ ಪ್ರತಿಭೆಯುಳ್ಳ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರನ್ನು ಮಠಾಧೀಶರನ್ನಾಗಿ ಹೊಂದಿರುವುದು ನಿಮ್ಮೆಲ್ಲರ ಪುಣ್ಯ ವಿಶೇಷ ಎಂದು ಶ್ರೀಗಳು ಹೇಳಿದರು.

ಜಿಗೇರಿಯ ಷ. ಬ್ರ. ಶ್ರೀ ಗುರು ಸಿದ್ಧೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ನರೇಗಲ್ಲ ದರಗಾದ ಮಂಜೂರ ಹುಸೇನ್ ಶ್ಯಾವಲಿ ಶರಣರು ಉಪಸ್ಥಿತರಿದ್ದರು. ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ಸದಸ್ಯರು ಮತ್ತು ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯ ಶಿಕ್ಷಕಿಯರು ಪ್ರಾರ್ಥನೆ ಸಲ್ಲಿಸಿ, ಸಿದ್ಧಾಂತ ಶಿಖಾಮಣಿಯ ಶ್ಲೋಕಗಳನ್ನು ಹೇಳಿದರು.

ಶಿವಾನಂದ ಗೋಗೇರಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರನ್ನು ಕುರಿತ ಗೀತೆಯನ್ನು ಹಾಡಿದರು. ಡಾ. ಕೆ.ಬಿ. ಧನ್ನೂರವರ ಗಾಯನ ಭಕ್ತರ ಮನಸೂರೆಗೊಂಡಿತು. ಕಳಕಮಲ್ಲಯ್ಯ ಅಣ್ಣಿಗೇರಿಮಠ ತಬಲಾ ಸಾಥ್ ನೀಡಿದರು. ಶಿವಯೋಗಿ ಜಕ್ಕಲಿ ನಿರೂಪಿಸಿದರು. ರುದ್ರಯ್ಯ ಸೊಬರದಮಠ ಸ್ವಾಗತಿಸಿದರು. ನರೇಗಲ್ಲ ಬೀಚಿ ಬಳಗದ ಅಧ್ಯಕ್ಷ ಕೆ.ಎಸ್. ಕಳಕಣ್ಣವರ ವಂದಿಸಿದರು.

ಹಿರೇಮಠದ ಮಲ್ಲಿಕಾರ್ಜುನ ಶ್ರೀಗಳು ಆಶೀರ್ವಚನ ನೀಡಿ, ಶರಣರಾಗುವುದು ಎಷ್ಟೊಂದು ಸುಲಭ ಎನ್ನುವುದನ್ನು ಶ್ರೀ ಗಂಗಾಧರ ಶ್ರೀಗಳು ತಿಳಿಸಿದ್ದಾರೆ. ಶರಣರು ಯಾವಾಗಲೂ ನಿಜ ಸುಖಿಗಳು. ಶರಣರಿಗೆ ಸುಖ ಎಂದಿಗೂ ಶಾಶ್ವತವಾಗಿರುತ್ತದೆ. ಅಂತಹ ಶರಣರಲ್ಲಿ ಯೋಗಿ ವೇಮನರೂ ಒಬ್ಬರು ಎಂದು ಹೇಳಿ ಅವರ ಚರಿತ್ರೆಯನ್ನು ವಿವರಿಸಿ, ಹೇಮರಡ್ಡಿ ಮಲ್ಲಮ್ಮನ ಬೋಧನೆಯಿಂದ ವೇಮನ ಯೋಗಿಯಾಗಿ ಬದಲಾಗುತ್ತಾನೆ. ಹೇಮರಡ್ಡಿ ಮಲ್ಲಮ್ಮ ತನ್ನ ಇಂತಹ ಅನೇಕ ಸಾಧುತನದ ಗುಣಗಳಿಂದ ಸಾಧ್ವಿ ಹೇಮರಡ್ಡಿ ಮಲ್ಲಮ್ಮಳಾದಳು. ಅವಳ ಚರಿತ್ರೆಯನ್ನು ಓದಿ ನೀವೂ ಸಾಧ್ವಿ ಶಿರೋಮಣಿಗಳಾಗಿ ಎಂದರು.

# ವಿದ್ಯಾರ್ಥಿಗಳು ವಿದ್ಯಾಭ್ಯಾಸದತ್ತ ಚಿತ್ತ ಹರಿಸಿ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪ್ರತೀ ಮಗುವೂ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರುತ್ತದೆ. ಆ ಕಾರಣಕ್ಕಾಗಿಯೇ ಆದರಹಳ್ಳಿಯಂತಹ ಗ್ರಾಮೀಣ ಭಾಗಗಳಲ್ಲಿಯೂ ಸರಕಾರ ಪ್ರೌಢಶಾಲಾ ಹಂತದ ಶಿಕ್ಷಣ ನೀಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಅಭಿಪ್ರಾಯಪಟ್ಟರು.

ಅವರು ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆ ಆದರಹಳ್ಳಿಯಲ್ಲಿ ಹಮ್ಮಿಕೊಂಡ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪ್ರೇರಣೆ ಮತ್ತು ಪಾಲಕರ ಸಭೆಯಲ್ಲಿ ಮಾತನಾಡಿ, ಸಮಯ ಅತ್ಯಮೂಲ್ಯವಾಗಿದ್ದು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳು ಮೊಬೈಲ್, ಟಿವಿಯಿಂದ ಅಂತರ ಕಾಯ್ದುಕೊಂಡು ವಿದ್ಯಾಭ್ಯಾಸದತ್ತ ಚಿತ್ತ ಹರಿಸಬೇಕು. ಪಾಲಕರು ಮಕ್ಕಳನ್ನು ತಪ್ಪದೇ ಶಾಲೆಗೆ ಕಳುಹಿಸಬೇಕು ಎಂದರು.

ಮುಖ್ಯೋಪಾಧ್ಯಾಯ ಈಶ್ವರ ಮೆಡ್ಲೇರಿ ಮಾತನಾಡಿ, ದುಡಿಯಲು ದೂರದ ಊರುಗಳಿಗೆ ಹೋಗುವ ಆದರಹಳ್ಳಿಯ ಬಹುತೇಕ ಪಾಲಕರ ಮಕ್ಕಳು ಪ್ರೌಢಶಾಲಾ ಶಿಕ್ಷಣದಿಂದ ವಂಚಿತರಾಗುತ್ತಿದ್ದರು. ಸರಕಾರ ಅದಕ್ಕಾಗಿಯೇ ಇಲ್ಲಿಯೇ ಪ್ರೌಢಶಾಲೆ ಪ್ರಾರಂಭಿಸಿದ್ದು ಪಾಲಕರು ಜಾಗೃತರಾಗಬೇಕಿದೆ ಎಂದರು.

ಗ್ರಾ.ಪಂ ಸದಸ್ಯ ಶೇಖಣ್ಣ ಲಮಾಣಿ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಬಿ. ಹೊಸಮನಿ, ಶಿಕ್ಷಕರಾದ ಶ್ರೀಕಾಂತ ನಂದೆಣ್ಣವರ, ಮಂಜುಳಾ ಮೆಣಸಿನಕಾಯಿ, ಅಶ್ವಿನಿ ಕುಲಕರ್ಣಿ, ಹೊಳಲಮ್ಮ ದೊಡ್ಡಮನಿ, ಮಂಜುಳಾ ಪೂಜಾರ, ಸಿಆರ್‌ಪಿ ಗಿರೀಶ ನೇಕಾರ ವೇದಿಕೆಯಲ್ಲಿದ್ದರು. ಚಂದ್ರು ಅಂಟಿನ, ಎಸ್.ಎಸ್. ಅಂಗಡಿ ನಿರೂಪಿಸಿದರು.

## ಉತ್ತರ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳ ಚರ್ಚೆಗೆ ಸಿದ್ಧ: ಡಿಸಿಎಂ

**■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ**

ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳ ಚರ್ಚೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಕರ್ನಾಟಕ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೋಮವಾರ ಹೇಳಿದ್ದಾರೆ.

ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಡಳಿತ ಅಥವಾ ವಿರೋಧ ಪಕ್ಷದ ಯಾವುದೇ ಸದಸ್ಯರು ಎತ್ತುವ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರ ಸಿದ್ಧವಿದೆ. ಉತ್ತರ ಕರ್ನಾಟಕದ ಬರ ಪರಿಸ್ಥಿತಿಗೆ ಸಂಬಂಧಿಸಿದ ಚರ್ಚೆಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಉತ್ತರ ಕರ್ನಾಟಕ, ಕಿತ್ತೂರು ಕರ್ನಾಟಕ, ಹಳೇ ಮೈಸೂರು ಪ್ರದೇಶ ಇವೆಲ್ಲವೂ ಕರ್ನಾಟಕದ ಅವಿಭಾಜ್ಯ ಅಂಗಗಳಾಗಿದ್ದು, ಅವುಗಳ ಸಮಸ್ಯೆಗಳನ್ನು ಚರ್ಚಿಸಲು ನಾವು ಸದಾ ಮುಕ್ತರಾಗಿದ್ದೇವೆ ಎಂದರು.

ಬೆಳಗಾವಿ ಜಿಲ್ಲೆ ವಿಭಜನೆಗೆ ಸಂಬಂಧಿಸಿದಂತೆ ಕರೆ ನೀಡಲಾಗಿರುವ ಬಂದ್ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, ಸದನದಲ್ಲಿ ಆ ಪ್ರಸ್ತಾಪ ಮುಂದಿಟ್ಟರೆ ಮಾತ್ರ ಅದರ ಬಗ್ಗೆ ಖಂಡಿತವಾಗಿಯೂ ಯೋಚಿಸುತ್ತೇವೆ ಎಂದರು. ಸಾವರ್ಕರ್ ಭಾವಚಿತ್ರವನ್ನು ಸದನದಿಂದ ತೆಗೆದುಹಾಕುವ ಬಗ್ಗೆ ಅವರ ನಿಲುವಿನ ಬಗ್ಗೆ ಕೇಳಿದ ಪ್ರಶ್ನೆಗೆ, "ಎರಡೂ ಸದನಗಳ ಒಳಗೆ ಇದ್ದದ್ದು ಸ್ಪೀಕರ್ ಮತ್ತು ಅಧ್ಯಕ್ಷರಿಗೆ ಸೇರಿದ್ದು" ಎಂದು ಹೇಳಿದರು.

ಬಿಜೆಪಿ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, ಇತರ ಪಕ್ಷಗಳ ಬಗ್ಗೆ ಮಾತನಾಡಲು ನಾನು ಒಪ್ಪುವುದಿಲ್ಲ ಎಂದು ತಿಳಿಸಿದರು.

# ಅಡವಿಸೋಮಾಪುರದಲ್ಲಿ 'ಜನಪದ ಜೋಕಾಲಿ'

**■ ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಇತ್ತೀಚೆಗೆ ಅಡವಿಸೋಮಾಪುರ ಗ್ರಾಮದ ಅಕ್ಕಮಹಾದೇವಿ ಕಮತ ಅವರ ನಿವಾಸದಲ್ಲಿ ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ-50ರ ಸರಣಿ ಕಾರ್ಯಕ್ರಮ 'ಜನಪದ ಜೋಕಾಲಿ'ಯನ್ನು ಆಯೋಜಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗದಗ ಕಸಾಪ ಅಧ್ಯಕ್ಷೆ ಡಾ. ರಶ್ಮಿ ಅಂಗಡಿ ವಹಿಸಿದ್ದರು. ಮಂಜುನಾಥ ಮಾದರ, ಜಗದೀಶ ತಳವಾರ ಮತ್ತು ಸಂಗಡಿಗರು ಜನಪದ ಗೀತೆಗಳನ್ನು ಹಾಡಿದರು. ಜನಪದ ಕಲಾವಿದ ವೀರಣ್ಣ ಅಂಗಡಿ ಮಾತನಾಡಿ, ಮೂಲ ಜನಪದವನ್ನು ಉಳಿಸಿಕೊಳ್ಳುವ ಅಗತ್ಯತೆಯನ್ನು ಒತ್ತಿ ಹೇಳಿದರು. ಅಧ್ಯಕ್ಷೀಯ ನುಡಿಗಳನ್ನಾಡಿದ ಡಾ. ರಶ್ಮಿ ಅಂಗಡಿ, ಮನುಷ್ಯನ ಆರಂಭದಿಂದ ಜನಪದ ಉಗಮವನ್ನು ಗುರುತಿಸಬಹುದು. ಓದು-ಬರಹ ಕಲಿಯದೇ ಜನಪದವನ್ನು ಇಂದಿನವರೆಗೂ ಪೋಷಿಸಿಕೊಂಡು ಬಂದವರೆಲ್ಲರಿಗೂ ನಮನಗಳನ್ನು ಸಲ್ಲಿಸಿದರು.




ಕಾರ್ಯಕ್ರಮದಲ್ಲಿ ಹನುಮವ್ವ ರಾಮಪ್ಪ ಹೊಸಳ್ಳಿ, ಬಸವ್ವ ಚಿದಾನಂದಪ್ಪ ಕನ್ಯಾಳ, ನೀಲವ್ವ ಮುದಕಪ್ಪ ಜಗ್ಗಲ, ಈರವ್ವ ಯಲ್ಲಪ್ಪ ಬೆಳ್ಳಿ, ಭರಮವ್ವ ಕಾರಪ್ಪ ಹಮ್ಮಿಗಿ, ಮಾಬೂಬಿ ಕುಮನೂರ, ಗಂಗಮ್ಮ ಪ್ರಭಣ್ಣ ಡೊಳ್ಳಿನ, ಅನಸವ್ವ ದ್ಯಾಮಣ್ಣ ಹಳ್ಳಿ, ಸುಭದ್ರವ್ವ ಯಲ್ಲಪ್ಪ ಕತ್ತಿ, ಶರಣವ್ವ ಶೇಖಪ್ಪ ಹುಳ್ಳಿ, ಸುಮಂಗಲಾ ಮಲ್ಲನಗೌಡ ಪಾಟೀಲ, ಮಂಜುನಾಥ ಮಾದರ, ಜಗದೀಶ ತಳವಾರ ಮುಂತಾದವರಿದ್ದರು.

ಎಸ್.ಎಂ. ಪಾಟೀಲ, ಮಲ್ಲನಗೌಡ ಶಂಕರಗೌಡ ಪಾಟೀಲ, ರಾಮಪ್ಪ ಬಸಪ್ಪ ಕಮತ, ಬಸಮ್ಮ ಚಿದಾನಂದಪ್ಪ ಕನ್ಯಾಳ, ಮಾಬೂಬಿ ಕುಮನೂರ, ರೇಣವ್ವ ಉಮ್ಮಣ್ಣವರ, ಬಿ.ಬಿ. ಹರ್ತಿ, ಎಂ.ಸಿ. ದೊಡ್ಡಮನಿ, ಪಾರ್ವತಿ ಬೇವಿನಮರದ ಹಾಜರಿದ್ದರು. ಅಕ್ಕಮಹಾದೇವಿ ಕಮತ ಸ್ವಾಗತಿಸಿದರು. ಜ್ಯೋತಿ ಹೇರಲಗಿ ನಿರೂಪಿಸಿದರು.

## ಶ್ರೀ ಜಗದಂಬಾ ದೇವಸ್ಥಾನದಲ್ಲಿ ಕಾರ್ತಿಕೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಮರಾಠಾ ವಿದ್ಯಾವರ್ಧಕ ಸಂಘದ ಆವರಣದಲ್ಲಿರುವ ಶ್ರೀ ಜಗದಂಬಾ ದೇವಸ್ಥಾನದಲ್ಲಿ ಕಾರ್ತಿಕೋತ್ಸವವು ಡಿ. 12ರ ಸಾಯಂಕಾಲ 7 ಗಂಟೆಗೆ ಸಂತ ಮಂಡಳಿಯ ಭಜನಾ ಕಾರ್ಯಕ್ರಮದೊಂದಿಗೆ ಶ್ರೀ ಜಗದಂಬಾ ದೇವಿಯ ಕಾರ್ತಿಕೋತ್ಸವ ಹಾಗೂ ಪಾಲಕಿ ಉತ್ಸವ ಜರುಗಲಿದೆ.

ಮರಾಠಾ ವಿದ್ಯಾವರ್ಧಕ ಸಂಘ, ಗದಗ-ಬೆಟಗೇರಿ ಪಾಲಕಿ ಸೇವಾ ಉತ್ಸವ ಸಮಿತಿ, ಶ್ರೀ ರಾಜಮಾತಾ ಜೀಜಾಬಾಯಿ ಮಹಿಳಾ ಮಂಡಳ, ಶ್ರೀ ಛತ್ರಪತಿ ಶಿವಾಜಿ ಯುವಕ ಸಂಘ, ಸಮಾಜ ಬಾಂಧವರು ಹಾಗೂ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಎಲ್ಲರೂ ಶ್ರೀದೇವಿಯ ಕೃಪೆಗೆ ಪಾತ್ರರಾಗಲು ಸಂಘದ ಅಧ್ಯಕ್ಷ ವಿನೀತಕುಮಾರ ವ್ಹಿ. ಜಗತಾಪ,



ಗೌರವ ಕಾರ್ಯದರ್ಶಿ ಶಿವಾಜಿ ವಾಯ್.ಗ್ವಾರಿ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

**ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ**

# ನೈಸರ್ಗಿಕ ಸಂಪತ್ತು ಎಲ್ಲ ಸಂಪತ್ತಿಗಿಂತ ದೊಡ್ಡದು

■ವಿಜಯಸಾಕ್ಷಿ ಸುದ್ದಿ, ಗದಗ

ನೆಲ, ಜಲ, ಗಾಳಿ, ಬೆಳಕು, ಗಿಡ-ಮರಗಳು, ನೈಸರ್ಗಿಕ ಸಂಪತ್ತು ನಮ್ಮ ಜೀವನದ ಅವಿಭಾಜ್ಯ ಅಂಗ. ಅವುಗಳ ಸಂರಕ್ಷಣೆಗಾಗಿ ನಾವೆಲ್ಲರೂ ಮುಂದಾಗಬೇಕು. ಅಂದಾಗ ಮಾತ್ರ ಆರೋಗ್ಯವಂತ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ವಲಯ ಅರಣ್ಯಾಧಿಕಾರಿ ನಮನ್ ಅಭಿಪ್ರಾಯಪಟ್ಟರು.

ಅವರು ಸ್ಥಳೀಯ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯ ಮುಂಭಾಗದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದಿನ ವೈಜ್ಞಾನಿಕ ಯುಗದಲ್ಲಿ ಏನೆಲ್ಲಾ ಅನ್ವೇಷಣೆ ಸಾಧ್ಯವಾಗಿದೆ. ಆದರೆ ನೀರು, ಗಾಳಿ, ಮಣ್ಣನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ಹೀಗಾಗಿ ಎಲ್ಲ ಸಂಪತ್ತಿಗಿಂತ ನೈಸರ್ಗಿಕ ಸಂಪತ್ತು ಅತಿ ಮಹತ್ವದ್ದು. ಅವುಗಳ ಸಂರಕ್ಷಣೆ ನಮ್ಮ ಆದ್ಯ ಕರ್ತವ್ಯ.

ನಮ್ಮ ಅರಿವಿಗೆ ಬಾರದೆ ನಾವು ಅವುಗಳನ್ನು ನಿರ್ಲಕ್ಷಿಸುತ್ತಿರುವುದು ಅತ್ಯಂತ ನೋವಿನ ಸಂಗತಿ. ಪ್ರಕೃತಿ ನಮ್ಮ ಬದುಕಿಗೆ ಸಾಕಷ್ಟು ಪೂರಕ ಅಂಶಗಳನ್ನು ಕಲ್ಪಿಸುವುದರಿಂದ ಅವುಗಳನ್ನು ಕಾಪಾಡಲು ನಾವು



ಹೆಚ್ಚು ಆದ್ಯತೆಯನ್ನು ನೀಡಲೇಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಡಾ. ಬಸವರಾಜ್ ಧಾರವಾಡ ಮಾತನಾಡಿ ಕೆಲವೇ ತಿಂಗಳಲ್ಲಿ ಬಸವರಾಜ್ ಹೊರಟ್ಟಿ ಅವರ ಸಹಕಾರದಿಂದ ಸರ್ಕಾರಿ ಶಾಲೆ ತನ್ನ ಕಳೆಯನ್ನು ಹೆಚ್ಚಿಸಿಕೊಂಡಿದೆ. ಇಲ್ಲಿ ಅಧ್ಯಯನ ಮಾಡುವ ಮಕ್ಕಳು ಇದರ ಸದುಪಯೋಗ ಪಡೆಯಬೇಕೆಂದು ಆಶಿಸಿದರಲ್ಲದೆ, ಬಸವರಾಜ್ ಹೊರಟ್ಟಿ ದಂಪತಿಗಳ ಸತ್ಕಾರ್ಯದಿಂದ ಸಮಾಜಕ್ಕೆ, ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಪ್ರಯೋಜನವಾಗಿದೆ. ಹೀಗಾಗಿ ಅವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ರೇಣುಕಾ ರೋಣದ, ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ.ಅಣ್ಣಿಗೇರಿ, ಎಸ್.ಆರ್. ಹನಮಗೌಡ್ರ, ಎಂ.ಪಿ. ಸಾಂಬ್ರಾಣಿ, ಎಸ್.ಬಿ. ಗುಳೇದವರ, ಎಸ್.ಎಂ. ಪತ್ತಾರ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎನ್.ಆರ್. ಶಿರೋಳ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ, ಪಿ.ವ್ಹಿ. ದಾಸರ, ಎಲ್.ಎಸ್. ಮಾಳೊತ್ತರ ಮುಂತಾದವರು ಉಪಸ್ಥಿತರಿದ್ದರು. ಎಸ್.ಜಿ. ಕುಲಗುಡಿ ಹಾಗೂ ಎಸ್.ಎಸ್. ಗಾಳಿ ಕಾರ್ಯಕ್ರಮ ನಿರೂಪಿಸಿದರು. ಎಮ್.ಆಯ್. ಶಿವನಗೌಡ್ರ ವಂದಿಸಿದರು.

> ಬಸವರಾಜ್ ಹೊರಟ್ಟಿ ದಂಪತಿಗಳು ಈ ಸರ್ಕಾರಿ ಪ್ರೌಢಶಾಲೆಯನ್ನು ದತ್ತು ಪಡೆಯುವ ಮೂಲಕ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಉತ್ಕೃಷ್ಟವಾದ ಶೈಕ್ಷಣಿಕ ವಾತಾವರಣವನ್ನ ಕಲ್ಪಿಸಿದ್ದು, ಹೆಮ್ಮೆಯ ವಿಚಾರ. ಇದೇ ರೀತಿ ಎಲ್ಲ ಜನಪ್ರತಿನಿಧಿಗಳು, ದಾನಿಗಳು, ಶಿಕ್ಷಣ ಪ್ರೇಮಿಗಳು ಮುಂದಾದರೆ ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳನ್ನು ಮಾದರಿಯಾಗಿ ಕಟ್ಟಲು ಸಾಧ್ಯವಾಗುತ್ತದೆ. ಅಂತಹ ವಾತಾವರಣ ಎಲ್ಲೆಡೆ ಮೂಡಲಿ ಎಂದು ಅರಣ್ಯಾಧಿಕಾರಿ ನಮನ್ ಆಶಿಸಿದರು.

**ಸಂತೋಷ ಅಂಗಡಿಯವರ 'ಭವದ ಅಗುಳಿ' ಪುಸ್ತಕ ಲೋಕಾರ್ಪಣೆಗೊಳಿಸಿದ ಸಾಹಿತಿ ಜಯಂತ ಕಾಯ್ಕಿಣಿ**

# ಕವಿತೆಗಳು ಮಾನವೀಯ ಅಂತಃಕರಣದ ಒರತೆಗಳಾಗಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಜೀವನಾನುಭವಗಳನ್ನು ಎರಕ ಹೊಯ್ದ ಕಾವ್ಯ ಬಹುಕಾಲ ಬಾಳುತ್ತದೆ. ಕವಿಯಾದವನು ಸುತ್ತಲಿನ ಜಗತ್ತನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅನೇಕ ಸಂಗತಿಗಳು ಗೋಚರಿಸುತ್ತವೆ. ಅವುಗಳನ್ನೇ ವಸ್ತುವಾಗಿಸಿಕೊಂಡಾಗ ಸಾಮಾಜಿಕ ಸಂಬಂಧದೊಂದಿಗೆ ಕವಿತೆ ಹೊಸೆಯಲ್ಪಡುತ್ತದೆ. ಇಂತಹ ಕವಿತೆಗಳು ಮಾನವೀಯ ಅಂತಃಕರಣದ ಒರತೆಗಳಾಗಿ ಗೋಚರಿಸುತ್ತವೆ ಎಂದು ಸಾಹಿತಿ ಜಯಂತ ಕಾಯ್ಕಿಣಿ ನುಡಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅನ್ವೇಷಣೆ ಪ್ರಕಾಶನ ಗದಗ ಇವರ ಸಹಯೋಗದಲ್ಲಿ ಗದುಗಿನ ಡಿ.ಜಿ.ಎಂ. ಆಯುರ್ವೇದ ಮಹಾವಿದ್ಯಾಲಯದಲ್ಲಿ ಜರುಗಿದ ಸಂತೋಷ ಅಂಗಡಿ ಅವರ 'ಭವದ ಅಗುಳಿ' ಕವನ ಸಂಕಲನ ಜನಾರ್ಪಣೆಗೊಳಿಸಿ ಮಾತನಾಡಿದರು.

ಅನ್ವೇಷಣೆ ಪ್ರಕಾಶನದ ಆರ್.ಜಿ. ಹಳ್ಳಿ ನಾಗರಾಜ ಮಾತನಾಡಿ, ಸಾಹಿತ್ಯ ಪತ್ರಿಕೆಗಳ ಸಂಖ್ಯೆ ಕಡಿಮೆಯಾಗಿವೆ. ಅನ್ವೇಷಣೆ ಸಾಹಿತ್ಯ ಪತ್ರಿಕೆ ಓದುಗರಲ್ಲಿ



ಸಾಹಿತ್ಯಾಭಿರುಚಿಯನ್ನು ಬೆಳೆಸಿ ಚಿಂತನೆಗೆ ಹಚ್ಚುವ ಕಾರ್ಯ ಮಾಡುತ್ತಿದೆ. ಭರವಸೆಯ ಬರಹಗಾರರು ಕನ್ನಡ ಸಾಹಿತ್ಯವನ್ನು ಹೊಸದಿಕ್ಕಿನತ್ತ ಕೊಂಡೊಯ್ಯುವ ಕಾರ್ಯ ಮಾಡಬೇಕೆಂದರು.

ಮುಖ್ಯ ಅತಿಥಿ ಚಂದ್ರಶೇಖರ ವಸ್ತ್ರದ ಮಾತನಾಡಿ, ಗದಗ ಪರಿಸರ ಸಾಹಿತ್ಯ-ಸಂಸ್ಕೃತಿಗೆ ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದೆ. ಈ ಹಿನ್ನೆಲೆಯಲ್ಲಿ ಸಂತೋಷ ಅಂಗಡಿಯವರು ತಮ್ಮ ಕಾವ್ಯದ ಮೂಲಕ ಹೊಸ ಭರವಸೆಯ ಕವಿಯಾಗಿ ಹೊಮ್ಮಿರುವದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಹಾಕಿರುವ ಅಗಳಿಯನ್ನು ತೆಗೆದು ಹೊಸ್ತಿಲ ದಾಟಿ ಹೊರ ನಡೆದಾಗ ಅನೇಕ ಸಂಗತಿಗಳು ಗೋಚರಿಸುತ್ತವೆ. ಆ ಸಂದರ್ಭದಲ್ಲಿ ಕವಿಯಾದವರು ಮುಖಾಮುಖಿಯಾಗಬೇಕಾಗುತ್ತದೆ. ಆಂತರಿಕ ಮತ್ತು ಬಾಹ್ಯ ಜಗತ್ತಿನ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಅಗುಳಿಯನ್ನು ತೆಗೆದು ಸಾಗಬೇಕಾದ್ದು ಅವಶ್ಯ ಎಂದರು. ಡಿ.ಜಿ.ಎಂ. ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಸಂತೋಷ ಬೆಳವಡಿ, ಕವಿ ಸಂತೋಷ ಅಂಗಡಿ, ರವಿ ದೇವರಡ್ಡಿ ಮಾತನಾಡಿದರು.

ನಿರ್ಮಲಾ ಶೆಟ್ಟರ ನಿರೂಪಿಸಿದರು. ಡಾ. ಚಿದಾನಂದ ಕಮ್ಮಾರ ಪರಿಚಯಿಸಿದರು. ಭಾಗ್ಯ ಪತ್ತಾರ ಹಾಡಿದರು. ಕಿಶೋರಬಾಬು ನಾಗರಕಟ್ಟ ಸ್ವಾಗತಿಸಿದರು. ಶಿವಾನಂದ ಗಿಡ್ನಂದಿ ವಂದಿಸಿದರು.

ಕಾರ್ಯಕ್ರಮದಲ್ಲಿ ಕೆ.ಎಚ್. ಬೇಲೂರ, ಅನ್ನದಾನಿ ಹಿರೇಮಠ, ಡಾ. ದತ್ತಪ್ರಸನ್ನ ಪಾಟೀಲ, ಡಾ. ಜಿ.ಬಿ. ಪಾಟೀಲ, ಡಾ. ಎಚ್.ಬಿ. ಪೂಜಾರ, ರತ್ನಕ್ಕ ಪಾಟೀಲ, ಎಂ.ಜಿ. ಗಚ್ಚಣ್ಣವರ, ಆರ್.ಎಲ್. ಪೊಲೀಸ್‌ಪಾಟೀಲ, ಬಿ.ಎ. ಕೆಂಚರಡ್ಡಿ, ಪುಂಡಲೀಕ ಕಲ್ಲಿಗನೂರ, ಟಿ.ಎಸ್. ಗೊರವರ, ಡಾ. ನಿಂಗು ಸೊಲಗಿ, ಮಂಜುಳಾ ವೆಂಕಟೇಶಯ್ಯ, ಶಿಲ್ಪಾ ಮ್ಯಾಗೇರಿ, ಪದ್ಮಾ ಕಬಾಡಿ, ಬಸವರಾಜ ಗಣಪ್ಪನವರ, ಅಂದಾನಪ್ಪ ವಿಭೂತಿ, ವಿ.ವಿ. ನಡುವಿನಮನಿ, ಶಂಕರ ಕುಕನೂರ, ಡಾ. ಕೆ.ವಿ. ಸಂಕನಗೌಡರ, ಶಶಿಕಾಂತ ಕೊರ್ಲಹಳ್ಳಿ, ಶಾರದಾ ಬಾಣದ, ಮರುಳಸಿದ್ಧಪ್ಪ ದೊಡ್ಡಮನಿ, ಡಿ.ಎಸ್. ಬಾಪುರಿ, ಚಂದ್ರಪ್ಪ ಬಾರಂಗಿ, ಪಿ.ಟಿ. ಬೈಲಪ್ಪನವರ, ಎಸ್.ಎಂ. ಕಾತರಕಿ, ಜಯಶ್ರೀ ಶ್ರೀಗಿರಿ, ಎಸ್.ಎಂ. ಕಿತ್ತೂರ, ಡಾ. ರಶ್ಮಿ ಅಂಗಡಿ, ಚಂದ್ರಕಲಾ ಇಟಗಿಮಠ, ಬಸವರಾಜ ನೆಲಜೇರಿ, ನೀಲಮ್ಮ ಅಂಗಡಿ, ಪ್ರಕಾಶ ಕಡಮೆ, ಭಾಗ್ಯಜ್ಯೋತಿ ಹಿರೇಮಠ, ವೀಣಾ ನಿರಂಜನ, ಡಾ. ಲಕ್ಷ್ಮಣ ಬಿ.ಎ., ಅಣ್ಣಿಗೇರಿ, ಎಸ್.ಎಂ. ಗೌಡರ ಮೊದಲಾದವರು ಭಾಗವಹಿಸಿದ್ದರು.

> ವಿಮರ್ಶಕ ಜಿ.ಪಿ. ಬಸವರಾಜು ಮಾತನಾಡಿ, ಕಾವ್ಯ ಸಂಕ್ಷಿಪ್ತತೆ, ನಿಖರತೆ ಮತ್ತು ರೂಪಕಗಳನ್ನು ಹೊಂದಿ ಭಾಷಾ ಸೊಗಡಿನಿಂದ ಕೂಡಿರಬೇಕು. ಜೀವಪರ ಕಾಳಜಿ ಕವಿಯ ಧ್ಯೇಯವಾಗಿರಬೇಕು. ಭವದ ಅಗುಳಿಯ ಕವಿತೆಗಳು ಕಾವ್ಯದ ಜೊತೆಗೆ ಮುಖಾಮುಖಿಯಾಗುವ ಸಂದರ್ಭವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದರು.

# ರೋಟರಿ ಸಂಸ್ಥೆಗೆ ಜಿಲ್ಲಾ ಗವರ್ನರ್ ಭೇಟಿ



■ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಜಿಲ್ಲೆ 3170ರ ಜಿಲ್ಲಾ ಗವರ್ನರ್ ರೊ. ನಾಸಿರ್ ಬೋರ್ಸಡ್ವಾಲಾರು ರೋಟರಿ ಸಂಸ್ಥೆ ಗದಗ-ಬೆಟಗೇರಿಗೆ ಅಧಿಕೃತವಾಗಿ ಭೇಟಿನೀಡಿದರು. ಸಂಸ್ಥೆಯ ಹಣಕಾಸು ಹಾಗೂ ಇತರ ದಾಖಲೆಗಳನ್ನು ಪರಿಶೀಲಿಸಿ, ಸಂಸ್ಥೆಯು ಎಲ್ಲ ದಾಖಲೆಗಳು ರೋಟರಿ ಅಂತರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿದೆ ಎಂದು ಅಭಿಪ್ರಾಯಪಟ್ಟರು. ಸಂಸ್ಥೆಯ ಕಾರ್ಯದರ್ಶಿ ವೀಣಾ ತಿರ್ಲಾಪೂರ ಎಲ್ಲ ದಾಖಲೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ರೋಟರಿ ಸಂಸ್ಥೆಯು ನಡೆಸುತ್ತಿರುವ ಕಣ್ಣಿನ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಯೋಜನೆಯನ್ನು ಹಮ್ಮಿಕೊಳ್ಳಲು ಸಲಹೆನೀಡಿದರು.

ಈ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ, ನಿಯೋಜಿತ ಅಧ್ಯಕ್ಷ ರೊ. ಡಾ. ಆರ್.ಬಿ. ಉಪ್ಪಿನ, ಜಂಟಿ ಕಾರ್ಯದರ್ಶಿ ರೊ. ಸಂತೋಷ ಅಕ್ಕಿ, ಖಜಾಂಚಿ ರೊ. ಶ್ರೀಧರ ಸುಲ್ತಾನಪೂರ, ರೊ. ಡಾ. ಜಿ.ಬಿ. ಪಾಟೀಲ, ರೊ. ಡಾ. ಆರ್.ಕೆ. ಗಚ್ಚಿನಮಠ, ರೋಟರಿ ಜಿಲ್ಲೆ 3170ದ ಆಡಳಿತ ಕಾರ್ಯದರ್ಶಿ ರೊ. ವಾಸುಕಿ ಸಂಜಿ, ಅಸಿಸ್ಟಂಟ್ ಗವರ್ನರ್ ರೊ. ಶರಣಬಸಪ್ಪ (ರಾಜು) ಗುಡಿಮನಿ ಉಪಸ್ಥಿತರಿದ್ದರು.

# ದೀಪದ ಬೆಳಕು ಅಜ್ಞಾನ ಕಳೆಯಲಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ದೀಪದ ಬೆಳಕು ಸುಭಿಕ್ಷೆಯ ಸಂಕೇತವಾಗಿದೆ ಎಂದು ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗದೇವರು ಹೇಳಿದರು.

ಅವರು ಪಟ್ಟಣದ ಸಮೀಪದ ನೀಲಗುಂದ ದಿವ್ಯ ಚೇತನ ಆಂಗ್ಲ ಮಾಧ್ಯಮ ಶಾಲೆ ಜ್ಞಾನಗಿರಿ ಗುದ್ನೇಶ್ವರ ಮಠ ಶಾಲೆಯ ದೇಗುಲದಲ್ಲಿ ದಿವ್ಯ ದೀಪೋತ್ಸವ ಉದ್ಘಾಟಿಸಿ ಮಾತನಾಡಿ, ದೀಪಗಳು ಅಂಧಕಾರ ನೀಗುವ ಸಂಕೇತವಾಗಿದ್ದು, ನಮ್ಮ ಬದುಕಿನ ಕತ್ತಲೆಯನ್ನು ಅಡಗಿಸಿ ನಮ್ಮ ಬಾಳಿಗೆ ಬೆಳಕು ನೀಡುತ್ತವೆ. ಈ ದೀಪಗಳು ಶಾಲೆಯಲ್ಲಿ ಕಲಿಯುವ ಮಕ್ಕಳ ಬಾಳಿಗೆ ಸದಾ ಬೆಳಕು ನೀಡಲಿ ಎಂದರು. ಈ ಸಂದರ್ಭದಲ್ಲಿ ಶಾಲೆಯ ಮಕ್ಕಳು, ಪಾಲಕರು ಹಾಗೂ ಶಿಕ್ಷಕ ವೃಂದದವರು ಶಾಲಾ ಆವರಣದಲ್ಲಿ ದೀಪೋತ್ಸವ ನೆರವೇರಿಸಿದರು.

# ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಆಯ್ಕೆಯಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭಾರತೀಯ ಜನತಾ ಪಾರ್ಟಿಯ ಶಿರಹಟ್ಟಿ ಮಂಡಲ, ಲಕ್ಷ್ಮೇಶ್ವರ ತಾಲೂಕು ಬಿಜೆಪಿ ಪದಾಧಿಕಾರಿಗಳ ಮತ್ತು ಬಿಎಲ್‌ಓ 2, ಬೂತ್ ಅಧ್ಯಕ್ಷ, ಶಕ್ತಿ ಕೇಂದ್ರಗಳ ಪ್ರಮುಖರ ಸಭೆಯನ್ನು ರವಿವಾರ ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಭೆಯಲ್ಲಿ ಮತದಾರರ ಪಟ್ಟಿ ಪರೀಕ್ಷಣೆ, ತಿದ್ದುಪಡಿ ಮತ್ತು ಮುಂಬರುವ ಲೋಕಸಭಾ ಚುನಾವಣೆಯ ಸಂಘಟನೆಯ ಕುರಿತು ಚರ್ಚಿಸಲಾಯಿತು. ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಪ್ರಧಾನಿ ಮೋದಿಯವರ ಪ್ರಾಮಾಣಿಕ ಆಡಳಿತದಿಂದ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಸೇರಿದೆ. ಲೋಕಸಭಾ ಚುನಾವಣೆಯಲ್ಲಿ ಕಾರ್ಯಕರ್ತರು ಮೋದಿಯವರ ಜನಪರ ಕಾರ್ಯ ಯೋಜನೆಗಳನ್ನು ಮತದಾರರ ಮನೆ-ಮನಕ್ಕೆ ತಲುಪಿಸುವ



ಮೂಲಕ ಮತ್ತೊಮ್ಮೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಲು ಸಿದ್ಧರಾಗಬೇಕೆಂದರು.

ಗದಗ ಜಿಲ್ಲಾ ಬಿಜೆಪಿ ಕೋಶಾಧ್ಯಕ್ಷ ನಾಗರಾಜ ಕುಲಕರ್ಣಿ ಮಾತನಾಡಿ, 2024ರಲ್ಲಿ ನಡೆಯುವ ಲೋಕಸಭೆ ಚುನಾವಣೆಯಲ್ಲಿ ಮೋದಿಯವರ ನೇತೃತ್ವದ ಬಿಜೆಪಿ ಪ್ರಚಂಡ ಬಹುಮತದಿಂದ ಗೆದ್ದು ಮತ್ತೆ ಅಧಿಕಾರಕ್ಕೆ ಬರುವದನ್ನು ಯಾವುದೇ ಶಕ್ತಿಗಳು ತಡೆಯಲಾರವು. ಸುಳ್ಳು ಗ್ಯಾರಂಟಿಗಳ ಬಗ್ಗೆ ಜನರು ಅರಿತು ಭಾರತಕ್ಕೆ ಮೋದಿಯೊಬ್ಬರೇ ಗ್ಯಾರಂಟಿ ಎನ್ನುವದನ್ನು ಮನಗಂಡಿದ್ದಾರೆ ಎಂದರು.

ಹಾವೇರಿ-ಗದಗ ಲೋಕ ಸಭಾ ವಿಸ್ತಾರಕ ಸಾಗರ್ ಹೊಸಮನಿ, ಶಿರಹಟ್ಟಿ ಮಂಡಲ ಅಧ್ಯಕ್ಷ ಫಕೀರೇಶ ರಟ್ಟಿಹಳ್ಳಿ ಮಾತನಾಡಿದರು.

ಪಕ್ಷದ ಪ್ರಮುಖರಾದ ಗಂಗಾಧರ ಮೆಣಸಿನಕಾಯಿ, ಸಂತೋಷ ಓಬಾಜಿ, ದುಂಡೇಶ ಕೊಟಗಿ, ವಿಜಯ ಕುಂಬಾರ, ಡಿ.ವೈ. ಹುನಗುಂದ, ಜಾನು ಲಮಾಣಿ, ಬಸವರಾಜ ಇಟಗಿ, ಹಾಲಪ್ಪ ಸೂರಣಗಿ, ಅಶೋಕ ಶಿರಹಟ್ಟಿ, ಭೀಮಣ್ಣ ಯಂಗಾಡಿ, ರುದ್ರಪ್ಪ ಉಮಚಗಿ, ರಮೇಶ ಹಾಳತೋಟದ, ಸಂತೋಷ ಜಾವೂರ, ಬಸವರಾಜ ಕಲ್ಲೂರ, ಅನಿಲ ಮುಳಗುಂದ, ವಿಶಾಲ್ ಬಟಗುರ್ಕಿ, ಈರಣ್ಣ ಅಕ್ಕೂರ, ರವಿ ಕೋರಿ, ಮಂಜುನಾಥ್ ಗಜಕೋಶ ಸೇರಿದಂತೆ ಮಹಾಶಕ್ತಿ ಕೇಂದ್ರದ ಪ್ರಮುಖರು, ಬೂತ್ ಅಧ್ಯಕ್ಷರು, ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

# ಹಕ್ಕುಗಳೊಂದಿಗೆ ಕರ್ತವ್ಯ ಪಾಲನೆ ಮಾಡಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹೆಚ್ಚುತ್ತಿರುವ ಭ್ರಷ್ಟಾಚಾರ ನಿಗ್ರಹಿಸುವ ಉದ್ದೇಶದಿಂದ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ಸ್ಥಾಪಿಸಲ್ಪಟ್ಟಿದೆ ಎಂದು ಸಂಸ್ಥೆಯ ಅಧ್ಯಕ್ಷ ಸೋಮಣ್ಣ ಬೆಟಗೇರಿ ಹೇಳಿದರು.

ಅವರು ಭಾನುವಾರ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಾಲು, ಬಿಸ್ಕೆಟ್ ಮತ್ತು ಹಣ್ಣು ವಿತರಿಸಿ ಮಾತನಾಡಿ, ಮಾಡುವ ಕೆಲಸದಲ್ಲಿ ಒಳಿತು-ಕೆಡುಕುಗಳನ್ನು ಅರಿತು ನಮ್ಮ ಹಕ್ಕುಗಳೊಂದಿಗೆ ಕರ್ತವ್ಯ ಪಾಲನೆ ಮಾಡಿದರೆ ಭ್ರಷ್ಟಾಚಾರ ತಡೆಗಟ್ಟಲು ಸಾಧ್ಯ. ಸಮಾಜದ ಪ್ರತಿಯೊಬ್ಬರೂ ಸತ್ಯ ಮತ್ತು ನ್ಯಾಯವನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಲಕ್ಷ್ಮೇಶ್ವರ ಕ್ರೈಮ್ ವಿಭಾಗದ ಪಿಎಸ್‌ಐ ವಿ.ಜಿ. ಪವಾರ, ಸಂಸ್ಥೆಯ ಕಾರ್ಯದರ್ಶಿ ವೀರೇಂದ್ರ ಕಾಳಮ್ಮನವರ, ರಾಜ್ಯ ಕಾರ್ಯದರ್ಶಿ ನಿರಂಜನ ವಾಲಿ, ಮಲ್ಲನಗೌಡ ಪಾಟೀಲ್, ಗಂಗಾಧರ ಹೂಗಾರ, ರಾಘವೇಂದ್ರ ಉಮಚಗಿ, ಮುಕ್ತುಮಸಾಬ ತೆಗ್ಗಿನಮನಿ ಇದ್ದರು.

## ನಿಧನ ವಾರ್ತೆ

**ಶಂಕ್ರಪ್ಪ ಪಕೀರಪ್ಪ ಅಂಗಡಿ**



ಗದಗ: ಇಲ್ಲಿನ ಸಿದ್ದರಾಮೇಶ್ವರ ನಗರದ ನಿವಾಸಿ, ನರೇಗಲ್ಲ ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶಂಕರಪ್ಪ ಪಕೀರಪ್ಪ ಅಂಗಡಿ (53) ಭಾನುವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ಮುಂಜಾನೆ ನೆರವೇರಿತು.

## ಪಂ. ಗವಾಯಿಗಳು ಈ ನಾಡಿನ ಹೆಮ್ಮೆ

▶▶ಮೊದಲನೇ ಪುಟದಿಂದ

ಗದಗ ತಾಲೂಕಿನ ವ್ಯಾಪಾರಸ್ಥರು, ಎಲ್ಲಾ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಸಾವಿರಾರು ಜನ ತಮ್ಮ ಹಸ್ತಾಕ್ಷರವನ್ನು ನೀಡಿ ಈ ಬೇಡಿಕೆಗೆ ಆಗ್ರಹಿಸಿ ಇಂದಿನ ಬಂದ್ ಕಾರ್ಯಕ್ರಮವನ್ನು ಬೆಂಬಲಿಸಿದ್ದಾರೆ ಎಂದರು.

ಡಾ. ಶರಣಬಸವ ಮಹಾಸ್ವಾಮಿಗಳು ಕೊಠಿಮಠ ತಳ್ಳಿಹಾಳ, ಬಸವರಾಜ ಬೆಳಧಡಿ, ಪೀರಸಾಬ ಕೌತಾಳ, ದಾವಲಸಾಬ ನಾಗನೂರ ಮುಂತಾದವರು ಪ್ರತಿಭಟನಾ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಮೆರವಣಿಗೆಯಲ್ಲಿ ಪ್ರಮುಖ ರಾದ ಸಿರಾಜ್‌ಅಹಮ್ಮದ ಐ.ಲಕ್ಕುಂಡಿ, ಹಾಜಿಅಲಿ ಎಚ್. ಕೊಪ್ಪಳ, ಝುಹಿರಾಭಿ ಅ. ನದಾಫ, ಜ್ಯೋತಿ ಎಸ್.ಕುಲಕರ್ಣಿ, ಚಾಂದಸಾಬ ಬೋದ್ಲೆಖಾನ, ಕೆ.ಎ. ಖಾಜಿ ಸೇರಿದಂತೆ ಗ್ರಾಮಸ್ಥರು, ಭಕ್ತಾಧಿಗಳು ಭಾಗವಹಿಸಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡುವಂತೆ ಒತ್ತಾಯಿಸಿದರು.


**ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ-582101**

**ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂ : 08372-259932**

**ಇ-ಮೇಲ್ : ka.gadag.betageri.cmc@gmail.com**

ನಂ.ಗಬೆನಸ/ತಾಂ.ವಿ/ವಹಿ/1326/2023-24 ದಿನಾಂಕ : 11-12-2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಸನ್ 2023-24 ನೇ ಸಾಲಿನ ನಗರಸಭೆ ಅನುದಾನದಲ್ಲಿ ಗದಗ ಬೆಟಗೇರಿ ಅವಳಿ ನಗರದಲ್ಲಿ ದಿನಂಪ್ರತಿ ಬರುವ ವಿದ್ಯುತ್ ಚಾಲಿತ ಕೊಳವೆ ಭಾವಿಗಳ ರಿಪೇರಿ ಕೆಲಸ ಕಾರ್ಯಗಳಿಗೆ ವಾಹನ ಚಾಲಕರು, ಎಲೆಕ್ಟ್ರೀಷಿಯನ್, ಪಂಪ್‌ಆಪರೇಟರ್ ಮತ್ತು ಹೆಲ್ಪರಗಳನ್ನು ಹೊರಗುತ್ತಿಗೆ ಮೂಲಕ ತೆಗೆದುಕೊಳ್ಳುವ ಕುರಿತು. ಇಂಡೆಂಟ್ ನಂ- DMA/2023-24/SE1416 ಹೊಂದಿರುವ ಕಾಮಗಾರಿಗೆ ದರಗಳನ್ನು ಆಹ್ವಾನಿಸಿದ್ದು ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಮುಖಾಂತರ ಟೆಂಡರ ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿಯ ವೆಬ್‌ಸೈಟ್ **www.gadag-betagericity.gov.in** ದಲ್ಲಿ ನೋಡಬಹುದು.

**ಇ-ಪ್ರೊಕ್ಯೂರಮೆಂಟ್ ವ್ಯವಸ್ಥೆ ಅಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿದೆ.**

(1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **26-12-2023** ಸಾಯಂಕಾಲ 04-00 ಘಂಟೆಯವರೆಗೆ (2) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : **27-12-2023** ಬೆಳಿಗ್ಗೆ 04-30 ಘಂಟೆಗೆ

**ಇತರೆ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರಮೆಂಟ್ ಹೆಲ್ಪಲೈನ್ ನಂಬರ್- No:+91-8046010000,+91 68948777 ಗೆ ಸಂಪರ್ಕಿಸಬಹುದು.**

ಸಹಿ/- (ಶ್ರೀಮತಿ ಉಷಾ ಮಹೇಶ ದಾಸರ) ಅಧ್ಯಕ್ಷರು ಗದಗ-ಬೆಟಗೇರಿ, ನಗರಸಭೆ

ಸಹಿ/- (ಶ್ರೀ ಗಂಗಪ್ಪ ಎಂ ಕೆ.ಎ.ಎಸ್) ಪೌರಾಯುಕ್ತರು, ಗದಗ-ಬೆಟಗೇರಿ, ನಗರಸಭೆ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/364/2023-24

ಕರ್ನಾಟಕ ಸಂಭ್ರಮ 50ರ ಅಂಗವಾಗಿ ವಿಶೇಷ ಘಟಕ ಯೋಜನೆಯಡಿ

# ಇಂದು ಜನಪರ ಉತ್ಸವ-2023

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರ್ನಾಟಕ ಸಂಭ್ರಮ 50 ರ ಅಂಗವಾಗಿ ವಿಶೇಷ ಘಟಕ ಯೋಜನೆಯಡಿ ಜನಪರ ಉತ್ಸವ-2023 ಕಾರ್ಯಕ್ರಮವನ್ನು ಡಿಸೆಂಬರ್ 12 ರಂದು ಸಂಜೆ 5.30 ಗಂಟೆಗೆ ಗಜೇಂದ್ರಗಡ ತಾಲೂಕಿನ ಮುಶಿಗೇರಿಯಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿರಹಟ್ಟಿ- ಬಾಳೆಹೊಸೂರು ಭಾವೈಕ್ಯತಾ ಮಹಾಸಂಸ್ಥಾನ ಪೀಠದ ಫಕೀರದಿಂಗಾಲೇಶ್ವರ ಮಹಾಸ್ವಾಮಿಗಳು, ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನಮಠದ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು, ಪ್ಯಾಟಿ ಧರ್ಮರಮಠದ ಪೀಠಾಧಿಪತಿಗಳಾದ ಸಕ್ರಪ್ಪಜ್ಜನವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸುವರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ರೋಣ ಶಾಸಕ ಜಿ.ಎಸ್. ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಮುಶಿಗೇರಿ ಗ್ರಾಮ ಪಂಚಾಯತ್ ಅಧ್ಯಕ್ಷ ರಾಜಶೇಖರ ಮಾಲಗಿತ್ತಿ, ಮುಶಿಗೇರಿ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ಮರಿಯವ್ವ ಮಾದರ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಬಸವರಾಜ ಹೂಗಾರ ವಿಶೇಷ ಆಹ್ವಾನಿತರಾಗಿ ಆಗಮಿಸುವರು.

ಮುಶಿಗೇರಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಂಜುನಾಥ ಮೇಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ ಸ್ವಾಗತ ಕೋರಿದ್ದಾರೆ.

ಜಿಲ್ಲೆಯಲ್ಲಿ 10934 ಪ್ರಕರಣಗಳು ರಾಜೀ ಸಂಧಾನದ ಮೂಲಕ ಇತ್ಯರ್ಥ: ಜಿಲ್ಲಾ ನ್ಯಾ. ಬಸವರಾಜ

# ಯಶಸ್ವಿಯಾಗಿ ಜರುಗಿದ 'ಲೋಕ ಅದಾಲತ್'

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯಾದ್ಯಂತ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಂಡಿದ್ದು, ಜಿಲ್ಲೆಯಲ್ಲಿ ಶನಿವಾರದಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿತ್ತು. ಜಿಲ್ಲೆಯಲ್ಲಿ ಒಟ್ಟು 14 ಬೆಂಚ್‌ಗಳನ್ನು ರಚಿಸಿ ರಾಜೀ ಸಂಧಾನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಅದರಲ್ಲಿ 3,718 ಚಾಲ್ತಿ ಪ್ರಕರಣಗಳನ್ನು ಹಾಗೂ 7,216 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಲಾಗಿದ್ದು, ಒಟ್ಟು 10,934 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ ತಿಳಿಸಿದ್ದಾರೆ.

ಇತ್ಯರ್ಥಗೊಂಡ ಪ್ರಕರಣಗಳಲ್ಲಿ 10 ಮೋಟಾರು ವಾಹನ ಅಪಘಾತ ಪ್ರಕರಣಗಳು, 144ಚೆಕ್‌ಬೌನ್ಸ್ ಪ್ರಕರಣಗಳು, 45 ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು, 306 ಅಸಲುದಾವೆ ಪ್ರಕರಣಗಳು, 93 ಬ್ಯಾಂಕ್ ಹಾಗೂ ಹಣ ವಸೂಲಾತಿ ಪ್ರಕರಣಗಳು, 28 ವೈವಾಹಿಕ ಪ್ರಕರಣಗಳು, 50 ವಿದ್ಯುಚ್ಛಕ್ತಿ ಪ್ರಕರಣಗಳು ಸೇರಿದಂತೆ ಒಟ್ಟು 3,718 ಚಾಲ್ತಿ ಪ್ರಕರಣಗಳನ್ನು ಒಟ್ಟು ರೂ.30,54,06,417 ಗಳ ಪರಿಹಾರದೊಂದಿಗೆ ರಾಜೀ ಸಂಧಾನ ಮೂಲಕ ಇತ್ಯರ್ಥಪಡಿಸಲಾಗಿದೆ.

ವ್ಯಾಜ್ಯಪೂರ್ವ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ಬ್ಯಾಂಕ್ ಪ್ರಕರಣಗಳು, ಬಿಎಸ್‌ಎನ್‌ಎಲ್, ಕಂದಾಯ ಅದಾಲತ್ ಪ್ರಕರಣಗಳು ಸೇರಿದಂತೆ ಒಟ್ಟು 7,216 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರೂ. 2,08,58,722ಗಳಿಗೆ ರಾಜೀ ಸಂಧಾನ ಮಾಡಲಾಗಿದೆ.



ಗದುಗಿನ ಪ್ರಧಾನ ಕೌಟುಂಬಿಕ ನ್ಯಾಯಾಲಯದಲ್ಲಿ ಹಾಗೂ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದಲ್ಲಿ 5 ಪ್ರಕರಣಗಳಲ್ಲಿ ದಂಪತಿಗಳನ್ನು ಪುನಃ ಒಂದು ಗೂಡಿಸಲಾಯಿತು. ರೋಣ ನ್ಯಾಯಾಲಯದಲ್ಲಿ 4 ಜೋಡಿ, ನರಗುಂದ ನ್ಯಾಯಾಲಯದಲ್ಲಿ 3 ಜೋಡಿ, ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ 1 ಜೋಡಿ, ಮುಂಡರಗಿ ನ್ಯಾಯಾಲಯದಲ್ಲಿ 1 ಜೋಡಿ ದಂಪತಿಗಳನ್ನು ಪುನಃ ಒಂದುಗೂಡಿಸಿ ಕಳುಹಿಸಿಕೊಡಲಾಯಿತು. ಒಟ್ಟು 14 ಜೋಡಿ ದಂಪತಿಗಳು ಈ ರಾಷ್ಟ್ರೀಯ ಲೋಕಅದಾಲತದಲ್ಲಿ ಪುನಃ ಒಂದು ಗೂಡಿದ್ದು ವಿಶೇಷವಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ, ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್ ಶೆಟ್ಟಿ, 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಖಾದರಸಾಬ ಎಚ್ ಬೆನಕಟ್ಟಿ, ಅಪರ ಹಿರಿಯ ದಿವಾಣಿ ನ್ಯಾಯಾಧೀಶರಾದ ಪ್ರಕಾಶ ಸಿ ಕುರುಬೆಟ್, ಪ್ರಧಾನ ದಿವಾಣಿ ನ್ಯಾಯಾಧೀಶರಾದ ಅರುಣ ಚೌಗಲೆ, ಜೆಎಂಎಫ್‌ಸಿ 1ನೇ ನ್ಯಾಯಾಲಯದ ನ್ಯಾಯಾಧೀಶರಾದ ಪುಷ್ಪಾ ಜೋಗೋಜಿ, ಜೆಎಂಎಫ್‌ಸಿ 2ನೇ ನ್ಯಾಯಾಲಯದ ನ್ಯಾಯಾಧೀಶರಾದ ಬೀರಪ್ಪ ಕಾಂಬಳೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಂ.ಐ. ಹಿರೇಮನಿಪಾಟೀಲ, ಉಪಾಧ್ಯಕ್ಷರಾದ ಎ.ಎಂ. ಹದ್ಲಿ, ಪ್ರಧಾನ ಕಾರ್ಯದರ್ಶಿ ಬಿ.ಎಚ್. ಮಾಡಲಗೇರಿ, ಜಂಟಿ ಕಾರ್ಯದರ್ಶಿ ಪಿ.ಬಿ. ಕಣಗಿನಹಾಳ, ಖಜಾಂಚಿ ವಿ.ಎಚ್. ಮೇರವಾಡೆ, ಸರ್ಕಾರಿ ಅಭಿಯೋಜಕರಾದ ಸವಿತಾ ಎಂ.ಶಿಗ್ಲಿ, ಜಿಲ್ಲಾ ಸರ್ಕಾರಿ ವಕೀಲರಾದ ಎಂ.ಎಂ. ಕುಕನೂರ, ಅಪರ ಜಿಲ್ಲಾ ಸರ್ಕಾರಿ ವಕೀಲರಾದ ಕೆ.ಎಸ್. ಹೂಲಿ ಹಾಗೂ ವಕೀಲ ವೃಂದದವರು, ಸಂಧಾನಕಾರ ವಕೀಲರು, ಪಕ್ಷಗಾರರು ಹಾಗೂ ಎಲ್ಲಾ ನ್ಯಾಯಾಲಯಗಳ ಸಿಬ್ಬಂದಿವರ್ಗ ಉಪಸ್ಥಿತರಿದ್ದು ಲೋಕ ಅದಾಲತ್ ಯಶಸ್ವಿಗೊಳಿಸಿದರು ಎಂದು ಅವರು ತಿಳಿಸಿದ್ದಾರೆ.

ಆಯಾ ತಾಲೂಕಾ ನ್ಯಾಯಾಲಯಗಳಲ್ಲಿಯೂ ಕೂಡ ತಾಲೂಕುಗಳ ನ್ಯಾಯಾಧೀಶರು ಹಾಗೂ ವಕೀಲ ವೃಂದದವರು, ಸಿಬ್ಬಂದಿ ವರ್ಗ, ಅಭಿಯೋಜನಾ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಲೋಕ ಅದಾಲತ್‌ನಲ್ಲಿ ಪಾಲ್ಗೊಂಡು ರಾಜೀ ಸಂಧಾನ ಯಶಸ್ವಿಗೊಳಿಸಿದರು.

ರಾಷ್ಟ್ರೀಯ ಲೋಕ ಅದಾಲತ್‌ಗೆ ಸಹಕಾರ ನೀಡಿದ ವಕೀಲ ವೃಂದದವರಿಗೆ, ಪಕ್ಷಗಾರರಿಗೆ, ಜಿಲ್ಲೆಯ ನ್ಯಾಯಾಧೀಶರಿಗೆ, ಸಿಬ್ಬಂದಿ ವರ್ಗದವರಿಗೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಗೆ, ಮಾಧ್ಯಮದವರಿಗೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಧನ್ಯವಾದ ತಿಳಿಸಿದ್ದಾರೆ.

ದಾನಮ್ಮದೇವಿಯ ಪ್ರವಚನ ಮಾಲಿಕೆಯಲ್ಲಿ ಪಂ.ಕಲ್ಲಿನಾಥ ಶಾಸ್ತ್ರೀ ಅಭಿಮತ

# ದಾನಮ್ಮ ತಾಯಿಯ ಸಾಮಾಜಿಕ ಕಳಕಳಿ ಶ್ಲಾಘನೀಯ

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ನಾಡಿನಲ್ಲಿ ಮೊಟ್ಟ ಮೊದಲ ಬಾರಿಗೆ ಸಾಮೂಹಿಕ ವಿವಾಹದ ಪರಿಕಲ್ಪನೆ ತಂದವರಲ್ಲಿ ಶಿವಶರಣೆ ತಾಯಿ ಗುಡ್ಡಾಪೂರದ ದಾನಮ್ಮ ಮುಂಚೂಣಿಯಲ್ಲಿದ್ದಾಳೆ ಎಂದು ಗದುಗಿನ ಹಿರಿಯ ಪ್ರವಚನಕಾರ ಪಂ. ಎಂ. ಕಲ್ಲಿನಾಥಶಾಸ್ತ್ರಿ ಅಡ್ನೂರ ಅಭಿಪ್ರಾಯಪಟ್ಟರು.

ಅವರು ರವಿವಾರ ಗದಗ ಬಸವೇಶ್ವರ ನಗರದ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ದಾನೇಶ್ವರಿ ಮಹಿಳಾ ಮಂಡಳ, ವೀರಭದ್ರ ದೇವಸ್ಥಾನ ಟ್ರಸ್ಟ್ ಕಮಿಟಿ, ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಕಮಿಟಿ ಆಶ್ರಯದಲ್ಲಿ ಶರಣೆ ದಾನಮ್ಮತಾಯಿ ಪುರಾಣ ಪ್ರವಚನ ಮಾಲಿಕೆಯಡಿ ಶರಣೆ ದಾನಮ್ಮ ತಾಯಿ ಹಾಗೂ ಶಿವಭಕ್ತ ಶರಣ ಸೋಮಲಿಂಗೇಶ್ವರ ವಿವಾಹ ಸನ್ನಿವೇಶವನ್ನು ವಿಶ್ಲೇಷಿಸಿ ಮಾತನಾಡಿದರು.

ಬಡಜನರ ಮದುವೆಯ ಕಷ್ಟಗಳನ್ನು ಅರಿತಿದ್ದ ದಾನಮ್ಮ ತನ್ನಿಂದ ಬಡವರಿಗೆ ಸಹಾಯ ಆಗಲೆಂದು ನಿರ್ಧರಿಸಿ,



ನನ್ನೊಂದಿಗೆ 551 ಬಡ ಹೆಣ್ಣು ಮಕ್ಕಳ ಸಾಮೂಹಿಕ ವಿವಾಹ ನೆರವೇರಿಸಬೇಕೆಂದು ಕರಾರನ್ನು ತಂದೆಗೆ ಹಾಕುತ್ತಾಳೆ. ತಂದೆ ದಾನಮ್ಮಳ ಸಾಮಾಜಿಕ ಕಳಕಳಿ ಅರಿತು ಸಾಮೂಹಿಕ ವಿವಾಹ ಜರುಗಿಸಲು ಒಪ್ಪುತ್ತಾರೆ. ಈ ಮದುವೆಗೆ ಬಸವಣ್ಣ ಮತ್ತು ನೀಲಾಂಬಿಕೆಯರೂ ಆಗಮಿಸಿ ಎಲ್ಲ ದಂಪತಿಗಳಿಗೆ ಶುಭಾಶೀರ್ವದಿಸಿ, ಶರಣೆ ದಾನಮ್ಮ ತಾಯಿಯ ಸಾಮಾಜಿಕ ಕಳಕಳಿಯನ್ನು ಶ್ಲಾಘಿಸುವರು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಶಿವಗಂಗಾ ಪಾಟೀಲ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಈರಮ್ಮ ಒಂಟಿಗೋಡಿಮಠ, ಲಕ್ಷ್ಮೀ ಗುರಿಕಾರ, ರತ್ನಾ ಇಟಗಿ, ಮಹಾನಂದ ಯಂಡಿಗೇರಿ, ಶೋಭಾ ಬೆಂಗಳೂರ, ಶಿವಲೀಲಾ ತಡಸದ, ಪುಷ್ಪಾವತಿ ಬಳ್ಳಾರಿ, ಆಗಮಿಸಿದ್ದರು. ಸಂಗೀತ ಕಲಾವಿದರಾದ ಮೃತ್ಯುಂಜಯ ಹಿರೇಮಠ, ಹೇಮಂತಕುಮಾರ ಹಿರೇಮಠ ಅವರಿಂದ ಸಂಗೀತ ಜರುಗಿತು. ಶಾರದಾ ಹಚಡದ ಸ್ವಾಗತಿಸಿದರು ಸುರೇಖಾ ಪಿಳ್ಳಿ ವಂದಿಸಿದರು.

ಡಿ. 12ರಂದು ಮುಂಜಾನೆ 8 ಗಂಟೆಗೆ ಶರಣೆ ದಾನಮ್ಮ ತಾಯಿ ಪಲ್ಲಕ್ಕಿ ಉತ್ಸವ ಹಾಗೂ ಕುಂಭಮೇಳ, ಮುಂಜಾನೆ 11 ಗಂಟೆಗೆ ಪುರಾಣ ಮಂಗಲೋತ್ಸವ ಸಮಾರಂಭ ನಡೆಯಲಿದೆ. ಸಾನಿಧ್ಯವನ್ನು ಅಡ್ನೂರಿನ ಪೂಜ್ಯ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು. ಅಧ್ಯಕ್ಷತೆಯನ್ನು ಶ್ರೀಶೈಲಪ್ಪ ಯಂಡಿಗೇರಿ ವಹಿಸುವರು. ಅತಿಥಿಗಳಾಗಿ ಶಿವಪುತ್ರಪ್ಪ ಶಿವಶಿಂಪಿಗೇರ, ಶಿವಬಸಪ್ಪ ಯಂಡಿಗೇರಿ, ಬಸವರಾಜ ಕಾಡಪ್ಪನವರ, ಶಿವಕುಮಾರ ಬೇವಿನಮರದ, ಈರಣ್ಣ ಕಾತರಕಿ, ಸುರೇಶ ಸಿರಿಗಣ್ಣವರ, ವೀರೇಶ ಮುನವಳ್ಳಿ, ರಾಚಪ್ಪ ಮಿಣಜಗಿ, ಶಂಭು ಕಾರಕಟ್ಟಿ, ಬಸವರಾಜ ರಾಮನಕೊಪ್ಪ, ಜಗದೀಶ ಯಚ್ಚಲಗಾರ, ಪ್ರದೀಪ ಕೊಡೇಕಲ್ ಆಗಮಿಸುವರು. ಪುರಾಣ ಸಮಿತಿಯ ಅಧ್ಯಕ್ಷೆ ಸುಧಾ ಕೆರೂರ, ಗೌರವಾಧ್ಯಕ್ಷೆ ಶೈಲಜಾ ಕೊಡೇಕಲ್, ಸುರೇಖಾ ಪಿಳ್ಳಿ, ಕಾರ್ಯದರ್ಶಿ ವಿಜಯಲಕ್ಷ್ಮೀ ಕಾತರಕಿ, ಶೋಭಾ ಗುಗ್ಗರಿ ಉಪಸ್ಥಿತರಿರುವರು.

ಪುರಾಣದಲ್ಲಿ ಪ್ರಸ್ತಾಪಿತ ದಾನಮ್ಮ-ಸೋಮಲಿಂಗ ವಿವಾಹವು ವೀರಭದ್ರೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿ ಗುರು-ಹಿರಿಯರ ಸಮ್ಮುಖದಲ್ಲಿ ಪಂಚ ಕಳಸದೊಂದಿಗೆ ಅರ್ಚಕ ಗಂಗಾಧರ ಹಿರೇಮಠ ಅವರ ಪೌರೋಹಿತ್ಯದಲ್ಲಿ ಜರುಗಿತು.

ಶರಣ ದಂಪತಿಗಳಾದ ರಾಜೇಶ್ವರಿ ಸಿದ್ಧಲಿಂಗಪ್ಪ ಇಟಗಿ ವರನ ಪ್ರತಿನಿಧಿಯಾಗಿ ಹಾಗೂ ಶರಣ ದಂಪತಿಗಳಾದ ಶೋಭಾ ಸಿದ್ಧಲಿಂಗಪ್ಪ ಗುಗ್ಗರಿ ಕನ್ಯಾ ಪ್ರತಿನಿಧಿಯಾಗಿ ಶರಣ ಭಕ್ತಾಧಿಗಳೊಂದಿಗೆ ವಿವಾಹ ಸನ್ನಿವೇಶವನ್ನು ವಾದ್ಯವೈಭವ, ಜಯಘೋಷಗಳೊಂದಿಗೆ ಯಶಸ್ವಿಗೊಳಿಸಿದರು. ದಾನೇಶ್ವರಿ ಮಹಿಳಾ ಮಂಡಳ, ವೀರಭದ್ರ ದೇವಸ್ಥಾನ ಟ್ರಸ್ಟ್ ಕಮಿಟಿ, ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಕಮಿಟಿಯ ಪದಾಧಿಕಾರಿಗಳು, ಟ್ರಸ್ಟಿಗಳಿದ್ದರು.

ಪಡಿತರ ಚೀಟಿಯಲ್ಲಿ ಆಗುತ್ತಿರುವ ಗೊಂದಲ ಸರಿಪಡಿಲು ಆಗ್ರಹಿಸಿ ಇಲಾಖೆಗೆ ಮುತ್ತಿಗೆ

# ಪಡಿತರ ಚೀಟಿ ಪರಿಷ್ಕರಣೆ 'ಸಕಾಲ'ವಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೇರ ಹಣ ವರ್ಗಾವಣೆಯಲ್ಲಿ ಆಗುತ್ತಿರುವ ತೊಂದರೆ ಹಾಗೂ ಹೊಸ ಪಡಿತರ ಚೀಟಿ ವಿತರಣೆಯಲ್ಲಾಗುತ್ತಿರುವ ಗೊಂದಲವನ್ನು ಸರಿಪಡಿಸಲು ಆಗ್ರಹಿಸಿ ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ನೇತೃತ್ವದಲ್ಲಿ ನೂರಾರು ಸ್ಲಂ ನಿವಾಸಿಗಳು ಗಾಂಧಿ ಸರ್ಕಲ್‌ನಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಆಹಾರ ಇಲಾಖೆಗೆ ಮುತ್ತಿಗೆ ಹಾಕಿ ಆಹಾರ ಇಲಾಖೆ ಅಧಿಕಾರಿಗಳ ಮೂಲಕ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಿದರು.

ಸಮಿತಿಯ ಅಧ್ಯಕ್ಷ ಇಮ್ತಿಯಾಜ ಆರ್ ಮಾನ್ವಿ ಮಾತನಾಡಿ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಡಿಯಲ್ಲಿ ಸಾವಿರಾರು ಕುಟುಂಬಗಳಿಗೆ ಈವರೆಗೂ ಪಡಿತರ ಹಾಗೂ ಅಕ್ಕಿಯ ಬದಲಾಗಿ ಹಣವೂ ಸಿಗದೇ ಪ್ರತಿನಿತ್ಯ ಆಹಾರ ಇಲಾಖೆಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.




ಸಚಿವರು ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಹಾಕಲು ಅವಕಾಶ ಕಲ್ಪಿಸಿ, ಅರ್ಜಿ ಸಲ್ಲಿಸಿರುವ ಕುಟುಂಬಗಳಿಗೆ 15 ದಿನದ ಒಳಗಾಗಿ ಹೊಸ ಪಡಿತರ ಚೀಟಿ ಸಿಗುವಂತೆ ಕ್ರಮ ಕೈಗೊಳ್ಳಬೇಕು, ಆಹಾರ ಇಲಾಖೆಯಲ್ಲಿ ಹೆಸರು ತಿದ್ದುಪಡಿ, ಸೇರ್ಪಡೆ ಮತ್ತು ಹೊಸ ಅರ್ಜಿಗಳನ್ನು ಹಾಕಲು ಸಕಾಲ ವ್ಯಾಪ್ತಿಗೆ ತರಬೇಕೆಂದು ಒತ್ತಾಯಿಸಿದರು.

ಅಲ್ಲದೆ, ಹೊಸ ಪಡಿತರ ಚೀಟಿ ವಿತರಣೆಯಲ್ಲಿ ವಿಳಂಬ ಮಾಡುತ್ತಿದ್ದಾರೆ. ಆಹಾರ ಇಲಾಖೆಯಿಂದ ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಹಾಕಲು ಸರಿಯಾದ ಸುತ್ತೋಲೆ ಇಲ್ಲದೇ ಸಾವಿರಾರು ಬಡ ಕುಟುಂಬಗಳು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಸಮಿತಿಯ ಮುಂದಾಳುಗಳಾದ ಅಶೋಕ ಕುಸಬಿ, ಪರವೀನಬಾನು ಹವಾಲ್ದಾರ, ಮೌಲಾಸಾಬ ಗಚ್ಚಿ, ಜಾಫರ ಢಾಲಾಯತ, ಶಂಕ್ರಪ್ಪ ರೋಣ, ವಿಶಾಲಕ್ಷಿ ಹಿರೇಗೌಡ್ರ, ವಂದನಾ ಶ್ಯಾವಿ, ಮಕ್ತುಮ ಮುಲ್ಲಾನವರ, ಇಬ್ರಾಹಿಂ ಮುಲ್ಲಾ, ಮಲೇಶಪ್ಪ ಕಲಾಲ, ಪ್ರಕಾಶ ಹಡಗಲಿ, ಸಾಕ್ರುಬಾಯಿ ಗೋಸಾವಿ, ದಾದು ಗೋಸಾವಿ, ಖಾಜೇಸಾಬ ಇಸ್ಮಾಯಿಲನವರ, ಸಲೀಮ ಕದಡಿ, ದುರ್ಗಪ್ಪ ಮಣಿವಡ್ಡರ, ಮಂಜುನಾಥ ಶ್ರೀಗಿರಿ, ಶಿವಾನಂದ ಶಿಗ್ಲಿ ಹಾಗೂ ವಿವಿಧ ಸ್ಲಂ ಪ್ರದೇಶದ ನೂರಾರು ಸ್ಲಂ ನಿವಾಸಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದರು.

# ಭ್ರಷ್ಟಾಚಾರ ನಿರ್ಮೂಲನೆಗೆ ಯುವಕರು ಸಂಘಟಿತರಾಗಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರದ ನಿರ್ಮೂಲನೆಗೆ ಹಾಗೂ ಮಾನವ ಹಕ್ಕುಗಳ ರಕ್ಷಣೆಗಾಗಿ ಜನತೆ ಒಗ್ಗಟ್ಟಾಗಬೇಕಿದೆ ಎಂದು ವಿಶ್ವ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಬ್ಯೂರೋ ರಾಜ್ಯಾಧ್ಯಕ್ಷ ಗಣೇಶ ಗುಗಲೋತ್ತರ ಹೇಳಿದರು.

ಪಟ್ಟಣದ ಎಸ್.ಎಂ. ಭೂಮರಡ್ಡಿ ಪದವಿ ಕಾಲೇಜಿನಲ್ಲಿ ವಿಶ್ವ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಬ್ಯೂರೋ ವತಿಯಿಂದ ಸೋಮವಾರ ನಡೆದ ಮಾನವ ಹಕ್ಕುಗಳ ದಿನಾಚರಣೆಯ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶ ಸ್ವತಂತ್ರ್ಯವಾದ ಬಳಿಕ ವ್ಯಕ್ತಿಯು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಅವಕಾಶವಿದೆ. ಇದಕ್ಕೆ ಮಾನವ ಹಕ್ಕುಗಳು ಮುಖ್ಯವಾಗಿದ್ದು, ಮಾನವ ಹಕ್ಕುಗಳ



ಬಗ್ಗೆ ತಿಳಿದುಕೊಳ್ಳುವುದರೊಂದಿಗೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಯುವ ಸಮೂಹ ಸಂಘಟಿತವಾಗಬೇಕಿದೆ. ಅಂದಾಗ ಮಾತ್ರ ಬಲಿಷ್ಠ ಹಾಗೂ ಅಭಿವೃದ್ಧಿ ದೇಶವನ್ನಾಗಿ ನಿರ್ಮಿಸಲು ಸಾಧ್ಯವಿದೆ ಎಂದರು.

ಉಪನ್ಯಾಸಕ ಬಿ.ವಿ. ಮುನವಳ್ಳಿ, ಪ್ರಕಾಶ ದಿವಾಣದ ಹಾಗೂ ಉಪನ್ಯಾಸಕ ಬಿ.ಕೆ. ಮಾದಿ ಮಾತನಾಡಿ, ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಘೋಷಿಸಲಾದ ಮಾನವ ಹಕ್ಕುಗಳನ್ನು 1948ರಲ್ಲಿ ವಿಶ್ವಸಂಸ್ಥೆ ಅಂಗೀಕರಿಸಿದೆ.

ನಮಗಿರುವ ಹಕ್ಕುಗಳನ್ನು ತಿಳಿದುಕೊಳ್ಳುವುದರೊಂದಿಗೆ ಭ್ರಷ್ಟಾಚಾರ ವ್ಯವಸ್ಥೆಯ ವಿರುದ್ಧ ಸೆಟೆದು ನಿಲ್ಲುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮವನ್ನು ಪ್ರಾಚಾರ್ಯ ಎಸ್.ಎನ್. ಶಿವರಡ್ಡಿ ಉದ್ಘಾಟಿಸಿದರು. ಸಂಘಟನೆಯ ಉತ್ತರ ಕರ್ನಾಟಕದ ಅಧ್ಯಕ್ಷ ಓಂಪ್ರಕಾಶ ಅಯ್ಯನಗೌಡರ, ಕೊಪ್ಪಳ ಜಿಲ್ಲಾಧ್ಯಕ್ಷ ಡಾ.ಶಿವಾನಂದ ಗಟ್ಟಿ, ಮುಖಂಡ ಅವಿನಾಶ ಮತ್ತಿಕಟ್ಟಿ, ಪ್ರಭುರಾಜ ಪಾಟೀಲ, ನಾಗರಾಜ ಹಜಾಳ, ಮಾಬುಸಾಬ ಕಮ್ಮಾರ, ಅಮರೇಶ ಅಂಗಡಿ, ಕೃಷ್ಣಾ ಶಿಂಗ್ರಿ, ಎಂ.ಎಲ್. ಕ್ವಾಟಿ, ಎಲ್.ಕೆ. ಹಿರೇಮಠ, ಎಲ್.ಕೆ. ವದ್ನಾಳ ಮುಂತಾದವರಿದ್ದರು.

# ಕರವೇ ಬೆಟಗೇರಿ ಘಟಕದಿಂದ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ನಕಲಿ ಬೆರಳಚ್ಚುಗಳನ್ನು ಬಳಸಿ ಬಯೋಮೆಟ್ರಿಕ್‌ನಲ್ಲಿ ಅಕ್ರಮವಾಗಿ ಹಾಜರಾತಿ ಹಾಕುತ್ತಿದ್ದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಬೆಟಗೇರಿ ನಗರ ಘಟಕದ ಅಧ್ಯಕ್ಷ ದಾವಲಸಾಬ್ ತಹಶೀಲ್ದಾರ್ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ವಿನಾಯಕ ಬದಿ ಮಾತನಾಡಿ, ಗದಗ ಜಿಲ್ಲಾ ಆಸ್ಪತ್ರೆಗೆ ಬರುವ ರೋಗಿಗಳು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ದೇವರಂತೆ ಕಾಣುವ ವೈದ್ಯರು ಹಾಗೂ ಸಿಬ್ಬಂದಿಗಳು ನಕಲಿ ಬೆರಳಚ್ಚುಗಳನ್ನು ಬಳಸಿ ಬಯೋಮೆಟ್ರಿಕ್‌ನಲ್ಲಿ ಅಕ್ರಮವಾಗಿ ಹಾಜರಾತಿಯನ್ನು ಹಾಕಿ ವೇತನವನ್ನು ಪಡೆಯುತ್ತಿದ್ದಾರೆ. ಇಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಜಿಲ್ಲಾ ಉಪಾಧ್ಯಕ್ಷ ಮುತ್ತಣ್ಣ ಚೌಡಣ್ಣವರ್ ಮಾತನಾಡಿ, ಈ ಅಕ್ರಮದಲ್ಲಿ ಭಾಗಿಯಾಗಿದವರ ಮೇಲೆ ಸೂಕ್ತ ಕಠಿಣ ಕ್ರಮ ಕೈಗೊಳಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಪ್ರಮುಖರಾದ ಕುಮಾರ್ ರೇವಣ್ಣವರ್, ಸಲೀಂ ಬೋಧಲೇಖಾನ್, ನಿಯಾಜ್ ಶೇಖ್, ಸಲೀಂ ಶಿರ್ವಾರ್, ಹುಸೇನ್ ಅಕ್ಕಿ, ತೌಸಿಫ್ ಡಾಲಾಯತ್, ಇರ್ಫಾನ್ ತಾಳಿಕೋಟೆ, ಶೋಭಾ ಕಲಾಲ್, ರೇಷ್ಮಾ, ಅರ್ಚನಾ, ಇಸಾಕ್ ನದಾಫ್, ಸುಲೇಮಾನ್ ಸೀತಾರಳಿ, ಇಮಾಮ್ ನದಾಫ್, ಇಸ್ಮಾಯಲ್ ಕಿಲ್ಲೆದಾರ್, ಅಕ್ಬರ್, ಕಾಂತು, ಗೌಸ್ ಶಿರಹಟ್ಟಿ, ಖಾಜಿಸಾಬ್ ಗಬ್ಬೂರ್, ರಾಜು ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka